ಸಂಪುಟ 01 | ಸಂಚಿಕೆ 01 | ಭಾನುವಾರ 16 ನವೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1)ರಾಷ್ಟ್ರೀಯ ಪತ್ರಿಕಾ ದಿನ (National Press Day)**

ಭಾರತದಲ್ಲಿ ಪ್ರತಿ ವರ್ಷ ನವೆಂಬರ್ 16 ರಂದು ಆಚರಿಸಲಾಗುತ್ತದೆ. ಈ ದಿನವನ್ನು 1966ರಲ್ಲಿ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ಸ್ಥಾಪನೆಯ ನೆನಪಿಗಾಗಿ ಆಚರಿಸಲಾಗುತ್ತದೆ. ಪತ್ರಿಕಾ ಸ್ವಾತಂತ್ರ್ಯ, ನೈತಿಕ ಪತ್ರಿಕೋದ್ಯಮ ಮತ್ತು ನಿಷ್ಠಾವಂತ ವರದಿಗಾರಿಕೆಯ ಮಹತ್ವವನ್ನು ಈ ದಿನ ವಿಶೇಷವಾಗಿ ಒತ್ತಿ ಹೇಳಲಾಗುತ್ತದೆ....1966: ಭಾರತದಲ್ಲಿ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ಸ್ಥಾಪಿಸಲ್ಪಟ್ಟಿತು.

**2. ಅಂತರರಾಷ್ಟ್ರೀಯ ಸಹಿಷ್ಣುತೆ ದಿನ (International Day for Tolerance)**

ಈ ದಿನವನ್ನು ವಿಶ್ವಸಂಸ್ಥೆಯು (UNESCO) ಪ್ರತಿ ವರ್ಷ ನವೆಂಬರ್ 16 ರಂದು ಆಚರಿಸುತ್ತದೆ.ಉದ್ದೇಶ: ಜನಾಂಗ, ಧರ್ಮ, ಭಾಷೆ, ಸಂಸ್ಕೃತಿ ಅಥವಾ ಅಭಿಪ್ರಾಯಗಳಲ್ಲಿ ವ್ಯತ್ಯಾಸವಿದ್ದರೂ ಸಹಿಷ್ಣುತೆ, ಪರಸ್ಪರ ಗೌರವ ಮತ್ತು ಶಾಂತಿ ಕಾಪಾಡುವ ಸಂದೇಶವನ್ನು ನೀಡುವುದು.ಇದು 1995ರಲ್ಲಿ ಯುನೆಸ್ಕೋ ಸಂಸ್ಥೆಯು ಸ್ಥಾಪಿಸಿದ ಮಹತ್ವದ ದಿನವಾಗಿದೆ.

**3. ವಿಶ್ವ ಪರಂಪರೆ ಒಪ್ಪಂದದ ಅಂಗೀಕಾರ ದಿನ (World Heritage Convention Adoption Day)**

ಯುನೆಸ್ಕೋ ಸಂಸ್ಥೆಯು 1972ರ ನವೆಂಬರ್ 16 ರಂದು "ವಿಶ್ವ ಪರಂಪರೆ ಸಂರಕ್ಷಣೆ" ಕುರಿತ ಅಂತರರಾಷ್ಟ್ರೀಯ ಒಪ್ಪಂದವನ್ನು ಅಂಗೀಕರಿಸಿತು. ಈ ಒಪ್ಪಂದದ ಮೂಲಕ ವಿಶ್ವದ ಸಾಂಸ್ಕೃತಿಕ ಹಾಗೂ ಪ್ರಕೃತಿ ಪರಂಪರೆ ಸ್ಥಳಗಳನ್ನು ಸಂರಕ್ಷಿಸಲು ಪ್ರಾರಂಭವಾಯಿತು.

## ಸುಭಾಷಿತ

"ಜನ ನಿಮ್ಮ ಗುರಿಗಳನ್ನು ನೋಡಿ ನಗಬೇಕು. ಇಲ್ಲದಿದ್ದರೆ ನಿಮ್ಮ ಗುರಿಗಳು ತೀರಾ ಸಣ್ಣವು ಎಂದು ಅರ್ಥ ಮಾಡಿಕೊಳ್ಳಿ. ಆದ್ದರಿಂದ ಮೊದಲಿಗೆ ವಿಲಕ್ಷಣವಾಗಿ ಕಾಣುವ ಗುರಿಗಳನ್ನು ಇಟ್ಟುಕೊಂಡು ಅದರ ಸಾಕಾರಕ್ಕೆ ಶ್ರಮಿಸಿ. ನಂತರ ನೀವೇ ಒಂದು ದಂತಕತೆಯಾಗುತ್ತೀರಿ."

**ಅಜೀಂ ಪ್ರೇಮ್‌ಜಿ ವಿಪ್ರೊ ಸಂಸ್ಥಾಪಕ**

# ಸಿಎಂ ಆಪ್ತರ ಔತಣಕೂಟ ಮುಂದೂಡಿಕೆ, ನಾಯಕತ್ವ ಬದಲಾವಣೆ ಚರ್ಚೆಗೆ ಬ್ರೇಕ್




**ಬೆಂಗಳೂರು: ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋತು ಸೊರಗಿದ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ನಡೆಯ ಬೇಕಿದ್ದ ಕರ್ನಾಟಕ ಸಚಿವ ಸಂಪುಟ ವಿಸ್ತರಣೆ ಮತ್ತು ರಾಜ್ಯದ ನಾಯಕತ್ವ ಬದಲಾವಣೆಯ ಚರ್ಚೆಗಳು ಕ್ಷೀಣವಾಗಿವೆ.ಸಿಎಂ ಸಿದ್ದರಾಮಯ್ಯ ಅವರ ಬಲ ಪ್ರದರ್ಶನಕ್ಕಾಗಿ ದೆಹಲಿಯಲ್ಲಿ ಆಯೋಜಿಸಿದ್ದ ಔತಣಕೂಟ ಕೂಡ ಮುಂದೂಡಿಕೆಯಾಗಿರುವ ಮಾಹಿತಿ ಇದೆ.**

ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿನಿಂದ ಮೂರು ದಿನಗಳ ಕಾಲ ದೆಹಲಿ ಪ್ರವಾಸ ಕೈಗೊಳ್ಳುವ ಪೂರ್ವ ನಿರ್ಧರಿತ ಕಾರ್ಯಕ್ರಮಗಳಿದ್ದವು. ಆದರೆ ಬಿಹಾರ ಚುನಾವಣೆ ಫಲಿತಾಂಶದ ಹಿನ್ನೆಲೆಯಲ್ಲಿ ಪ್ರವಾಸ ಮೊಟಕು ಗೊಂಡಿದೆ. ಇಂದು ಬೆಳಗ್ಗೆ ದೆಹಲಿಗೆ ಭೇಟಿ ನೀಡಲಿರುವ ಸಿದ್ದರಾಮಯ್ಯ ನಾಳೆ ಬೆಳಗ್ಗೆ ವಾಪಸ್ಸಾಗಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಿದ್ದರಾಮಯ್ಯ ಅವರ ಜೊತೆಗೆ ದೆಹಲಿಗೆ ತೆರಳುತ್ತಿದ್ದು ವಾಪಸ್ಸು ಬರುವ ಬಗ್ಗೆ ನಿರ್ದಿಷ್ಟ ವೇಳಾ ಪಟ್ಟಿ ತಿಳಿದು ಬಂದಿಲ್ಲ.


ದೆಹಲಿಯಲ್ಲಿ ಕೇಂದ್ರ ಸಚಿವರ ಜೊತೆಗೆ ಕಾಂಗ್ರೆಸ್ ಹೈಕಮಾಂಡ್ ನಾಯಕರನ್ನು ಸಿದ್ದರಾಮಯ್ಯ ಭೇಟಿ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ರಾಜ್ಯ ಸಭಾ ಸದಸ್ಯ ಕಪಿಲ್ ಸಿಬ್ಬಾಲ್ ಅವರ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಲಿರುವ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ಇತರ ನಾಯಕರು ನಾಳೆ ದೆಹಲಿಯಲ್ಲೇ ಉಳಿದು ಪಕ್ಷದ ವರಿಷ್ಠರ ಜೊತೆ ರಾಜ್ಯ ರಾಜಕಾರಣದ ಬಗ್ಗೆ ಮಹತ್ವದ ಚರ್ಚೆ ನಡೆಸಲಿದ್ದಾರೆ ಎಂದು ಹೇಳಲಾಗಿತ್ತು.

ರಾಹುಲ್‌ಗಾಂಧಿ ಅವರು ಭೇಟಿಗೆ ಸಮಯ ಕೊಟ್ಟರೆ, ಸಚಿವ ಸಂಪುಟ ಪುನರ್‌ರಚನೆ ಬಗ್ಗೆ ಚರ್ಚೆ ಮಾಡುವುದಾಗಿ ಸಿದ್ದರಾಮಯ್ಯ ಖುದ್ದು ಸುಳಿವು ನೀಡಿದ್ದರು. ಆದರೆ ಬಿಹಾರದ ಸೋಲಿನಿಂದ ಕಾಂಗ್ರೆಸ್‌ನಲ್ಲಿ ಸೂತಕದ ವಾತಾವರಣ ಇದೆ. ಈ ಸಂದರ್ಭದಲ್ಲಿ ಔತಣಕೂಟ ಆಯೋಜಿಸುವುದು ಮತ್ತು ಸಂಪುಟ ಪುನರ್‌ರಚನೆ ಸೇರಿದಂತೆ ರಾಜಕೀಯ ಚರ್ಚೆಮಾಡುವುದು ಸರಿಯಲ್ಲ ಎಂದು ನಾಯಕರು ನಿರ್ಧಾರಕ್ಕೆ ಬಂದಂತಿದೆ. ದೆಹಲಿಯಲ್ಲಿ ಸಂಜೆ ಸಂಸದ ರಾಜಶೇಖರ ಹಿಟ್ನಾಳ್ ಅವರ ಮನೆಯಲ್ಲಿ ನಡೆಯಬೇಕಿದ್ದ ಔತಣಕೂಟವನ್ನು ಮುಂದೂಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಮುಖ್ಯಮಂತ್ರಿ ಅವರ ಕಾರ್ಯಕ್ರಮಗಳು ಕೊನೆ ಕ್ಷಣದಲ್ಲಿ ಏರುಪೇರಾಗಿವೆ. ಸಿದ್ದರಾಮಯ್ಯ ಅವರ ನಾಯಕತ್ವ ಬದಲಾಗಬೇಕು ಎಂದು ಡಿ.ಕೆ.ಶಿವಕುಮಾರ್ ಬಳಗದ ಬಹಳಷ್ಟು ಪ್ರಮುಖರು ಹೇಳಿಕೆ ನೀಡಿದ್ದಲ್ಲದೇ, ಅದಕ್ಕೆ ಪೂರಕವಾಗಿ ತೆರೆಮರೆಯಲ್ಲಿ ಚಟುವಟಿಕೆಗಳನ್ನು ನಡೆಸಲಾಗಿತ್ತು. ಆದರೆ ಎಲ್ಲವೂ ಈಗ ತಿರುವು-ಮುರುವಾಗಿದೆ. ಸಚಿವ ಸಂಪುಟದಲ್ಲಿ ಸ್ಥಾನ ಪಡೆಯುವ ಉದ್ದೇಶದಿಂದ ಮುಖಂಡರ ಬೆನ್ನತ್ತಿ ಲಾಬಿ ನಡೆಸಿದ್ದ ಶಾಸಕರು ನಿರಾಶೆಗೊಳಗಾಗಿದ್ದಾರೆ. ಸಿದ್ದರಾಮಯ್ಯ ಅವರು ದೆಹಲಿಯಲ್ಲಿ ವರಿಷ್ಠರನ್ನು ಭೇಟಿ ಮಾಡುವ ಸಾಧ್ಯತೆ ಇದೆಯಾದರೂ ರಾಜ್ಯ ರಾಜಕಾರಣದ ಬಗ್ಗೆ ಚರ್ಚೆಯಾಗುವುದು ಕ್ಷೀಣ ಎನ್ನಲಾಗುತ್ತಿದೆ.

## ವನಸಿರಿ ಫೌಂಡೇಷನ್ ಗೆ ಸದಾಕಾಲವೂ ಮಾರ್ಗದರ್ಶಕರಾಗಿದ್ದ ಸಾಲು ಮರದ ತಿಮ್ಮಕ್ಕ ವಿಧಿವಶ



❑ ನೈಜ್ಯ ದೆಸೆ ನ್ಯೂಸ್



**ಹಲವಾರು ಗಿಡಗಳನ್ನು ತನ್ನ ಮಕ್ಕಳಂತೆ ಸಾಕಿ ಸಲುಹಿದ ವೃಕ್ಷಮಾತೆ ಪದ್ಮಶ್ರೀ ಸಾಲುಮರದ ತಿಮ್ಮಕ್ಕನವರು ವಿಧಿವಶರಾದ ಸುದ್ದಿ ನಮ್ಮ ವನಸಿರಿ ಫೌಂಡೇಷನ್ ತಂಡಕ್ಕೆ ತೀವ್ರ ದುಃಖವನ್ನೇ ತರಿಸಿದೆ ಎಂದು ವನಸಿರಿ ಫೌಂಡೇಷನ್ ಪದಾಧಿಕಾರಿಗಳು ವ್ಯಕ್ತಪಡಿಸಿದ್ದಾರೆ.**

ಕಾನನದ ದೇವತೆಯಂತೆ ಶತಾಯುಷ್ಯ ಪೂರೈಸಿ ನಮ್ಮೊಂದಿಗಿದ್ದು, ಇಂದಿನ ಪೀಳಿಗೆಗೆ ಅರಣ್ಯ ಸಂಪತ್ತಿನ ಮಹತ್ವವನ್ನು ಸಾರುವ ರಾಯಭಾರಿಯಾಗಿದ್ದ ತಿಮ್ಮಕ್ಕನವರ ಅಗಲಿಕೆ ರಾಜ್ಯಕ್ಕೆ ತುಂಬಲಾರದ ನಷ್ಟವನ್ನು ಉಂಟುಮಾಡಿದೆ ಪರಿಸರ ಪ್ರೇಮಿಗಳಿಗೆ ತೀವ್ರ ನೋವು ತಂದಿದೆ.

ಸಾಲುಮರದ ತಿಮ್ಮಕ್ಕನವರು ವೃಕ್ಷ ಸಂಪತ್ತನ್ನು ಬೆಳೆಸಿ ಉಳಿಸುವ ನಿಟ್ಟಿನಲ್ಲಿ ಪುಟ್ಟ ಮಕ್ಕಳಿಂದ ಹಿಡಿದು ಹಿರಿಯರವರೆಗೂ ಪ್ರೇರಣೆಯ ಶಕ್ತಿಯಾಗಿದ್ದರು. ಅವರು ನೆಟ್ಟ ಸಸಿಗಳು ಇಂದು ಹೆಮ್ಮರವಾಗಿವೆ.

ಅವರಿಂದ ಪ್ರೇರಣೆಗೊಂಡು ರಾಜ್ಯದಾದ್ಯಂತ ನೆಟ್ಟ ಗಿಡಗಳು ಭವಿಷ್ಯತ್ತಿನ ಪೀಳಿಗೆಗೆ ಉತ್ತಮ ಗಾಳಿ ಒದಗಿಸಿ ನೆರಳಿನ ಸೌಭಾಗ್ಯ ಕಲ್ಪಿಸಿವೆ.

ಕರುನಾಡಿನ ಪ್ರತಿ ಪ್ರಜೆಯೂ ಕನಿಷ್ಠ ಒಂದೊಂದು ಗಿಡವನ್ನು ನೆಟ್ಟು, ಮರವಾಗಿಸುವ ಸಂಕಲ್ಪ ತೊಟ್ಟು, ವೃಕ್ಷಮಾತೆ ಸಾಲುಮರದ ತಿಮ್ಮಕ್ಕನವರಿಗೆ ಶ್ರದ್ಧಾಂಜಲಿ ಸಮರ್ಪಿಸೋಣ. ಅವರ ಆತ್ಮಕ್ಕೆ ಚಿರಶಾಂತಿ ಕೋರೋಣ ಓಂ ಶಾಂತಿಃ ಎಂದು ತಿಳಿಸಿದ್ದಾರೆ.

## ಅಥ್ಲೆಟಿಕ್ ಕ್ರೀಡಾಕೂಟ: ಎನ್ ಎಂ ಎಸ್ ಪ್ರೌಢಶಾಲೆಯ ವಿದ್ಯಾರ್ಥಿನಿ ಅನನ್ಯ ರಾಜ್ಯಮಟ್ಟಕ್ಕೆ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್




**ಮಸ್ಕಿ: ಇತ್ತೀಚಿಗೆ ರಾಯಚೂರು ನಗರದ ಮಹಾತ್ಮ ಗಾಂಧಿ ಜಿಲ್ಲಾಕ್ರೀಡಾಂಗಣದಲ್ಲಿ ಶಾಲಾ ಶಿಕ್ಷಣ ಇಲಾಖೆ ವತಿಯಿಂದ 2025-26ನೇ ಸಾಲಿನಲ್ಲಿ ನಡೆದ ಜಿಲ್ಲಾಮಟ್ಟದ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಮಸ್ಕಿ ಪಟ್ಟಣದ ಎನ್ ಎಂ ಎಸ್ ಪ್ರೌಢಶಾಲೆಯ ವಿದ್ಯಾರ್ಥಿನಿ ಅನನ್ಯ ತಂದೆ ನಾಗರಾಜ ಜೋಗಿನ್ 9ನೇ ತರಗತಿ ವಿದ್ಯಾರ್ಥಿನಿ 17 ವರ್ಷ ವಯೋಮಿತಿಯ ಬಾಲಕಿಂ-ುರ ವಿಭಾಗದ ಉದ್ದ ಜಿಗಿತ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಹಾಗೂ100ಮೀಟರ್ ಓಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾಳೆ.**

ವಿಜೇತ ಕ್ರೀಡಾಪಟುವಿಗೆ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರು, ಸದಸ್ಯರು, ಶಾಲಾ ಮುಖ್ಯೋಪಾಧ್ಯಾಯರು, ಶಿಕ್ಷಕರು, ಶಾಲಾ ದೈಹಿಕ ಶಿಕ್ಷಣ ಶಿಕ್ಷಕ ದುರುಗಪ್ಪ, ಮರಿಬಸಪ್ಪ ಅಭಿನಂದಿಸಿದ್ದಾರೆ. ಜಿಲ್ಲಾಮಟ್ಟದ ಅಥ್ಲೆಟಿಕ್ ಕ್ರೀಡಾಕೂಟದಲ್ಲಿವಿಜೇತಳಾದ ಕ್ರೀಡಾಪಟುವನ್ನು ಶಾಲಾ ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯರು ಶ್ರೀಮತಿ ವಿದ್ಯಾವತಿ ವನಕಿ ಹಾಗೂ ಶಿಕ್ಷಕರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಭಾರತದ ಮಾಜಿ ಮಂತ್ರಿ ಭಾರತ್ ಸ್ಕೌಟ್ಸ್ ಗೈಡ್ಸ್ ಸಂಸ್ಥೆಯ ಕೊಂಡಜ್ಜಿ ಬಸಪ್ಪ ಪುಣ್ಯಸ್ಮರಣೆ

❑ ನೈಜ್ಯ ದೆಸೆ ನ್ಯೂಸ್

**ಮಾನವಿ: ಭಾರತ ಸರ್ಕಾರದ ಮಾಜಿ ಕೇಂದ್ರ ಮಂತ್ರಿ, ಭಾರತ ಸ್ಕೌಟ್ಸ್ ಮತ್ತು ಗೈಡ್ ನ ಕರ್ನಾಟಕ ರಾಜ್ಯ ಮುಖ್ಯಸ್ಥರಾಗಿದ್ದ ಕೊಂಡಜ್ಜಿ ಬಸಪ್ಪ ಅವರ ಪುಣ್ಯಸ್ಮರಣೆಯನ್ನು ಮಾನ್ವಿ ಸ್ಥಳೀಯ ಸಂಸ್ಥೆ ವತಿಯಿಂದ ಮಾನ್ವಿ ಪಬ್ಲಿಕ್ ಶಾಲೆಯಲ್ಲಿ ಆಯದಿಸಲಾಗಿತ್ತು. ಈ ಸಂದರ್ಭದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮ್ಮನ ಅರ್ಪಿಸಲಾಯಿತು.**

ಈ ಸಂದರ್ಭದಲ್ಲಿ ಮಾತನಾಡಿದ ಜಂಟಿ ಕಾರ್ಯದರ್ಶಿ ನರಸಿಂಹಮೂರ್ತಿಯವರು ಕೊಂಡಜ್ಜಿ ಬಸಪ್ಪ ಅವರ ಜೀವನ ಚರಿತ್ರೆಯ ಬಗ್ಗೆ ಮಕ್ಕಳಿಗೆ ತಿಳಿಸಿಕೊಟ್ಟರು. ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ಕೊಂಡಜ್ಜಿ



ಗ್ರಾಮದಲ್ಲಿ ತಮ್ಮ ಜಮೀನನ್ನು ಸಂಸ್ಥೆಗೆ ದಾರೆ ಹಿರೆದರು. ಇಂದು ಆ ಸಂಸ್ಥೆ ರಾಜ್ಯಮಟ್ಟದ ತರಬೇತಿ ಸಂಸ್ಥೆಯಾಗಿ ಬೆಳೆದಿದೆ. ಅನೇಕ ವಿದ್ಯಾರ್ಥಿಗಳಿಗೆ ಶಿಕ್ಷಕರಿಗೆ ಅಲ್ಲಿ ತರಬೇತಿ ನೀಡಲಾಗುತ್ತಿದೆ ಎಂದು ನುಡಿದರು. ಪ್ರಸ್ತುತ ಸ್ಕೌಟು ಗೈಡ್ ಸಂಸ್ಥೆಯು ಮಾಜಿ ಮಂತ್ರಿ ಪಿಜಿಆರ್ ಹಿಂದೆ ಅವರ ನೇತೃತ್ವದಲ್ಲಿ ಮುನ್ನಡೆದಿದೆ.

## ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ವಿಶ್ವ ಮಧುಮೇಹ ದಿನಾಚರಣೆ ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು ನಗರದ ಸನ್ ರೈಸ್ ಡಿ?ಫಾರ್ಮಸಿ, ನರ್ಸಿಂಗ್ ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ಗಿಡಕ್ಕೆ ನೀರು ಹಾಯಿಸುವ ಮೂಲಕ ಹಸಿರು ಪರಿಸರದ ಸಂಕೇತವಾಗಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸನ್‌ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ಅಧ್ಯಕ್ಷರಾದ ಶ್ರೀ ಇರ್ಫಾನ್ ಕೆ ಅವರು ವಹಿಸಿಕೊಂಡಿದ್ದರು.**

ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಇರ್ಫಾನ್ ಕೆ ಪ್ರತಿ ವರ್ಷ ನವೆಂಬರ್ 14ರಂದು ವಿಶ್ವ ಮಧುಮೇಹ ದಿನವನ್ನು ಆಚರಿಸಲಾಗುತ್ತದೆ. ಮಧುಮೇಹದ ಬಗ್ಗೆ ಜಾಗೃತಿ ಮೂಡಿಸುವುದು, ತಡೆಗಟ್ಟುವ ಮಾರ್ಗಗಳನ್ನು ತಿಳಿಸುವುದು ಮತ್ತು ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ. ಆರೋಗ್ಯಕರ ಜೀವನಶೈಲಿ




ನಿಯಮಿತ ವ್ಯಾಯಾಮ, ಸರಿಯಾದ ಮತ್ತು ಕ್ರಮಬದ್ಧ ಆಹಾರ ಪದ್ಧತಿ ,ಜಂಕ್ ಫುಡ್‌ನಿಂದ ದೂರವಿರುವುದು ಇತ್ಯಾದಿ ಅಭ್ಯಾಸಗಳನ್ನು ಅನುಸರಿಸುವುದರಿಂದ ಮಧುಮೇಹವನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಸಾಧ್ಯವೆಂದು ವಿವರಿಸಿದರು. ನಂತರ ವಿಶ್ವ ಮಧುಮೇಹ ದಿನಾಚರಣೆಯ ವಿಶೇಷ ಕಾರ್ಯಕ್ರಮಗಳು 1. ಉಚಿತ ರಕ್ತಪರೀಕ್ಷಾ ಶಿಬಿರ ಸನ್‌ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್‌ನ ವಿದ್ಯಾರ್ಥಿಗಳು ಕಾಲೇಜಿನ ಆವರಣದಲ್ಲಿ ಉಚಿತ ರಕ್ತ ಶುಗರ್ ಪರೀಕ್ಷಾ ಶಿಬಿರವನ್ನು ನಡೆಸಿದರು. ಪಾಲಕರು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸಿ ತಮ್ಮ ರಕ್ತದ ಶುಗರ್ ಮಟ್ಟವನ್ನು ತಪಾಸಣೆ ಮಾಡಿಸಿದರು.

2. ಮಧುಮೇಹ ಕುರಿತು ಜಾಗೃತಿ ಕಾರ್ಯಕ್ರಮ ವಿದ್ಯಾರ್ಥಿಗಳು ಮಧುಮೇಹದ ಕಾರಣಗಳು, ಲಕ್ಷಣಗಳು, ತಡೆಗಟ್ಟುವ ಮಾರ್ಗಗಳು, ಆಹಾರ ನಿಯಂತ್ರಣ ಮತ್ತು ಜೀವನಶೈಲಿಯ ಮಹತ್ವವನ್ನು ವಿವರಿಸುವ ಜಾಗೃತಿ ಕಾರ್ಯಕ್ರಮವನ್ನು ನಡೆಸಿದರು. 3. ನಾಟಕ / ರೂಪಕ ಪ್ರದರ್ಶನ ವಿದ್ಯಾರ್ಥಿಗಳು ವಿಶೇಷ ನಿತ್ಯ ರೂಪಕ (skit) ಮುಖಾಂತರ ಮಧುಮೇಹ ಏನು? ತಪ್ಪು ಆಹಾರ ಪದ್ಧತಿಗಳು ಹೇಗೆ ಕಾಡುತ್ತವೆ? ಸರಿಯಾದ ಜೀವನಶೈಲಿಯಿಂದ ಮಧುಮೇಹವನ್ನು ಹೇಗೆ ನಿಯಂತ್ರಿಸಬಹುದು? ಎಂಬ ವಿಷಯಗಳನ್ನು ಮನೋರಂಜನೆಯ ರೀತಿಯಲ್ಲಿ ಪ್ರದರ್ಶಿಸಿದರು. ನಂತರ ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಸನ್ ರೈಸ್ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಲಾಜರ್ ಸಿರಿಲ್ ಅವರು ಮಾತನಾಡಿ ಮಧುಮೇಹ ಕುರಿತು ಸಂಕ್ಷಿಪ್ತ ಮಾಹಿತಿ (Extra Information) ಮಧುಮೇಹ ಎಂದರೇನು? ದೇಹದಲ್ಲಿ ಇನ್ಸುಲಿನ್ ಕೊರತೆ ಅಥವಾ ದೇಹ ಇನ್ಸುಲಿನ್ ಅನ್ನು ಸರಿಯಾಗಿ ಬಳಸದೇ ಇದ್ದಾಗ ಉಂಟಾಗುವ ಸ್ಥಿತಿಯನ್ನು ಮಧುಮೇಹ (Diabetes Mellitus) ಎಂದು ಕರೆಯುತ್ತಾರೆ.

ಮಧುಮೇಹದ ಪ್ರಮುಖ ಪ್ರಕಾರಗಳವುವೆಂದರೆ 1. Type 1 Diabetes ? ಇನ್ಸುಲಿನ್ ಸಂಪೂರ್ಣ ಕೊರತ 2. Type 2 Diabetes ? ಇನ್ಸುಲಿನ್ ಪ್ರತಿರೋಧ / ಕಡಿಮೆ ಉತ್ಪಾದನೆ 3. Gestational Diabetes ಗರ್ಭಿಣಿ ಮಹಿಳೆಯರಲ್ಲಿ ಕಾಣುವಿಕೆ ತಡೆಗಟ್ಟುವ ಮಾರ್ಗಗಳು ದೈನಂದಿನ 30?45 ನಿಮಿಷಗಳ ವ್ಯಾಯಾಮ ತೂಕ ನಿಯಂತ್ರಣ ಜಂಕ್ ಫುಡ್, ಸಕ್ಕರೆ ಪಾನೀಯ ಕಡಿಮೆ ಮಾಡುವುದು ಹಣ್ಣು, ತರಕಾರಿ, Whole grain ಹೆಚ್ಚಿಸುವುದು ಒತ್ತಡ ನಿರ್ವಹಣೆ ನಿಯಮಿತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿ: ಶ್ರೀ ಇರ್ಷಾದ್ ಕೆ ಅತ್ತಾರ್, ಪ್ರಾಚಾರ್ಯ: ಶ್ರೀ ಲಾಜರ್ ಸಿರಿಲ್ ಜೆ , ಪ್ಯಾರಾ ಮೆಡಿಕಲ್ ಪ್ರಾಚಾರ್ಯ: ಶ್ರೀ ಚಕ್ರವರ್ತಿ ಡಿ ಕಾಲೇಜಿನ ಎಲ್ಲಾ ಉಪನ್ಯಾಸಕರು ಸಿಬ್ಬಂದಿಗಳು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ದಿಕ್ಕು ದಿಕ್ಕು ದೆಸೆಯಲ್ಲಿ ಹರಡುವೆ ನಾ..
ಸಮಾಜದಲ್ಲಿ ಹಿತವನ್ನು ಬಯಸುವೆ
ನ್ಯಾಯವನ್ನು ದೊರಕಿಸುವೆ
ದಿಕ್ಕು ದಿಕ್ಕು ದೆಸೆಯಲ್ಲಿ ಹರಡುವೆ ನಾ....

ಒಗ್ಗಟ್ಟಿನ ಹಾದಿಯ ತೋರಿಸುವೆ ನಾ...
ಜಾತಿ ಭೇದವ ಕೊಲ್ಲುವೆ
ಒಂದು ಹೆಸರಿನ ಹಾದಿಯಲ್ಲಿ
ನೈಜದ ಅನೇಕ ರೂಪವ ಬಲ್ಲವ
ದಿಕ್ಕು ದಿಕ್ಕು ದೆಸೆಯಲ್ಲಿ ಹರಡುವೇ ನಾ....

ಮಕ್ಕಳಿಗೆ ಮನರಂಜನೆಯಾಗಿ
ಯುವಕರಿಗೆ ಪ್ರೇರಣೆಯಾಗುವೆ ನಾ
ನೈಜತೆಯನ್ನು ಕಾಪಾಡುವೆನು
ದಿಕ್ಕು ದಿಕ್ಕು ದೆಸೆಯಲ್ಲಿ ಹರಡುವೆ ನಾ...
ನೈಜದ ದೆಸೆಯಲ್ಲಿ ಪ್ರಯಾಣ ಮಾಡ ಬಯಸುವೆ ನಾ...

ನೈಜದ ದೆಸೆಯಲ್ಲಿ ನನ್ನ ಪ್ರೇರಣೆಯಾಗಿರಿ
ಸತ್ಯದ ಹಾದಿಯಲ್ಲಿ ಕೈಜೋಡಿಸಿ
ಹನಿ ಹನಿ ಸೇರಿ ಹಳ್ಳ ವಾಗುವುದು
ಒಗ್ಗಟ್ಟಿನಲ್ಲಿ ಪಸರಿಸುವೆ ನಾ...
ದಿಕ್ಕು ದಿಕ್ಕು ದೆಸೆಯಲ್ಲಿ ಹರಡುವೆ ನಾ....

ಈ ನಿಮ್ಮ ಪತ್ರಿಕೋದ್ಯಮದಲ್ಲಿ ಶುಭವಾಗಲಿ, ಜಯವಾಗಲಿ,
ಬಲವಾಗಲಿ....
ದಿಕ್ಕು ದಿಕ್ಕು ದೆಸೆಯಲ್ಲಿ ಹರಡಲಿ...
ನೈಜ್ಯ ದಸೆ ಕನ್ನಡ
ದಿನಪತ್ರಿಕೆಗೆ ಶುಭವಾಗಲಿ...

ಯಾಸೀನಾ ಇರ್ಫಾನ್ ಸಿಂಧನೂರು

# ತಾರಾನಾಥ ಶಿಕ್ಷಣ ಸಂಸ್ಥೆ ಜನರ ವಿಶ್ವಾಸಾರ್ಹ ಶಿಕ್ಷಣ ಸಂಸ್ಥೆ: ಎನ್‌ಎಸ್ ಬೋಸರಾಜು

**❏ ನೈಜ್ಯ ದೆಸೆ ನ್ಯೂಸ್**



**ರಾಯಚೂರು: ಮಕ್ಕಳು ಶಿಕ್ಷಣ ಕಲಿಕೆಗೆ ಪೂರಕ ಸೌಲಭ್ಯಗಳಿಲ್ಲದ ಸಂದರ್ಭದಲ್ಲಿ ತಾರಾನಾಥ ಶಿಕ್ಷಣ ಸಂಸ್ಥೆ ಈ ಭಾಗದಲ್ಲಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಿದೆ. ನಿರಂತರವಾಗಿ ಸುಮಾರು 6–7 ದಶಕಗಳ ಕಾಲ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿರುವ ತಾರಾನಾಥ ಶಿಕ್ಷಣ ಸಂಸ್ಥೆ ಕಾರ್ಯ ಶ್ಲಾಘನೀಯವಾಗಿದೆ ಅಲ್ಲದೆ ಜಿಲ್ಲೆಯಲ್ಲಿ ಮೊದಲಬಾರಿಗೆ ಕಾನೂನು ಮಹಾವಿದ್ಯಾಲಯ ಸ್ಥಾಪಿಸಿದ ಕೀರ್ತಿ ಈ ಸಂಸ್ಥೆಗಿದೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಬೋಸರಾಜು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.**

ರಾಯಚೂರಿನ ಎಲ್ ವಿ ಡಿ ಮಹಾವಿದ್ಯಾಲಯದಲ್ಲಿ ಇಂದು ನಡೆದ ಕಲ್ಯಾಣ ಕರ್ನಾಟಕ ಭಾಗದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ರಾಯಚೂರಿನ ತಾರಾನಾಥ್ ಶಿಕ್ಷಣ ಸಂಸ್ಥೆಯ ಲಕ್ಷ್ಮೀ ವೆಂಕಟೇಶ ದೇಸಾಯಿ ಮಹಾವಿದ್ಯಾಲಯದ ಅಮೃತಮಹೋತ್ಸವ ಹಾಗೂ ಬಂಕಟಲಾಲ್ ರಾಜಾರಾಮ್ ಬೂಲ್ ವಾಣಿಜ್ಯ ಮಹಾವಿದ್ಯಾಲಯದ ವಜ್ರಮಹೋತ್ಸವ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಸಚಿವರಾದ ಎನ್ ಎಸ್ ಬೋಸರಾಜು ಅವರು ಭಾಗವಹಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಲಕ್ಷ್ಮೀ ವೆಂಕಟೇಶ ದೇಸಾಯಿ, ವೆಂಕಟಲಾಲ್ ಬೂಬ್ ಸೇರಿ ಅನೇಕ ಭೂ–ದಾನಿಗಳು ತನು–ಮನ ಧನ ಸಹಾಯದಿಂದ ಪ್ರಸ್ತುತ ದಿ. ನಾಗಪ್ಪ, ಹಾಗೂ ಅದ್ಯಕ್ಷರಾದ ಪಾರಸಮಾಲ್ ಸುಖಾಣಿ ಅವರ ಅದ್ಯಕ್ಷತೆಯಲ್ಲಿ ನಡೆಯುತ್ತಿರುವ ಸಂಸ್ಥೆಯಲ್ಲಿ ಪ್ರತಿ ವರ್ಷ 5000 ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಈ ಮಟ್ಟಕ್ಕೆ ಶಿಕ್ಷಣ ಸಂಸ್ಥೆ ಬೆಳೆಯಬೇಕಾದರೆ ದಾನಿಗಳ ಪಾತ್ರ ದೊಡ್ಡದು ಎಂದು ತಿಳಿಸಿದರು. ತಾರಾನಾಥ ಶಿಕ್ಷಣ ಸಂಸ್ಥೆ ಪ್ರಾರಂಭದಿಂದಲು ಈ ಭಾಗದ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಜನರ ವಿಶ್ವಾಸ ಗಳಿಸಿದೆ. ಈ ಭಾಗದ ವಿದ್ಯಾರ್ಥಿಗಳು ಕಾನೂನು ಪದವಿ ಪಡೆಯಬೇಕಾದರೆ ದಾರವಾಡ, ಬೆಂಗಳೂರಿನಂತಹ ಮಹಾನಗರಗಳಿಗೆ ತೆರಳಬೇಕಾಗಿತ್ತು ಅಂತ ಸಂದರ್ಭದಲ್ಲಿ ಇಲ್ಲಿಯೇ ಕಾನೂನು ಮಹಾ ವಿದ್ಯಾಲಯ ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿದ್ದಾರೆ. ಹಾಗಾಗಿ ಜಿಲ್ಲೆಯಲ್ಲಿ ಈ ತಾರಾನಾಥ ಶಿಕ್ಷಣ ಸಂಸ್ಥೆ ಹೆಸರುವಾಸಿಯಾಗಿದೆ. ಈ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ದೊಡ್ಡ ದೊಡ್ಡ ಸರ್ಕಾರಿ ಹುದ್ದೆ ಹಾಗೂ ಖಾಸಗಿ ಕ್ಷೇತ್ರದಲ್ಲಿಯೂ ದೇಶದಾದ್ಯಂತ ಕೆಲಸ ಮಾಡುತ್ತಿದ್ದಾರೆ ಎಂದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಕಾರ್ಯಕ್ರಮದ ಸಮಾರೋಪ ನುಡಿಕಾರರಾಗಿ ಆಗಮಿಸಿದ ಮಹರ್ಶಿ ವಾಲ್ಮೀಕಿ ವಿದ್ಯಾಲಯದ ಡಾ. ಎ ಚನ್ನಪ್ಪ, ತಾರಾನಾಥ ಶಿಕ್ಷಣ ಸಂಸ್ಥೆಯ ಅದ್ಯಕ್ಷರಾದ ಪಾರಸ್ಮಾಲ್ ಸುಖಾಣಿ, ಕಾರ್ಯದರ್ಶಿ ಅಂಬಾಪತಿ ಪಾಟೀಲ್, ಪುರುಷೋತ್ತಮ, ಜಟ್ರಮ್ ಶ್ರೀನಿವಾಸ್, ಚೇತನ್ ದೋಖಾ, ಜಯಣ್ಣ, ಕೆ ಶಾಂತಪ್ಪ, ರುದ್ರಪ್ಪ ಅಂಗಡಿ, ಜಿ ಶಿವಮೂರ್ತಿ, ಅಬ್ದುಲ್ ಕರೀಮ್ ಸೇರಿದಂತೆ ಅನೇಕರು ಉಪಸ್ಥಿರಿದ್ದರು.

# ವಿದ್ಯಾರ್ಥಿ ಜೀವನ ಅತ್ಯಮೂಲ್ಯವಾಗಿದೆ :ಸಿದ್ದನಗೌಡ ಪಾಟೀಲ್



**❏ ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ವಿದ್ಯಾರ್ಥಿ ಜೀವನ ಅತ್ಯಮೂಲ್ಯವಾಗಿದ್ದು ಈ ಸಮಯವನ್ನು ವ್ಯರ್ಥಮಾಡಿಕೊಳ್ಳದೆ ಉಪನ್ಯಾಸಕರು ನೀಡಿದ ಮಾರ್ಗದರ್ಶನವನ್ನು ಪಡೆದುಕೊಂಡು ತಮ್ಮ ಮುಂದಿನ ಜೀವನವನ್ನು ಹಾಗೂ ಭವಿಷ್ಯವನ್ನು ಚೆನ್ನಾಗಿ ರೂಪಿಸಿಕೊಳ್ಳಿ ಎಂದು ಕಲ್ಮಠ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಸಿದ್ದನಗೌಡ ಪಾಟೀಲ್ ತಿಳಿಸಿದರು.**


ಪಟ್ಟಣದ ಹಠಯೋಗಿ ಅವಧೂತ ಅನ್ನಮಯ್ಯತಾತ ದೇವಸ್ಥಾನದ ಆವರಣದಲ್ಲಿ ಕಲ್ಮಠ ಪದವಿ ಮಹಾವಿದ್ಯಾಲಯದ ರಾಷ್ಟ್ರೀಯ ಯೋಜನೆ ಘಟಕದ ವತಿಯಿಂದ ಹಮ್ಮಿಕೊಂಡ ಪರಿಸರ ವಿಕ್ಷೇಣೆ ಕಾರ್ಯಕ್ರಮದಲ್ಲಿ ಮಾತನಾಡಿ ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಪ್ರತಿನಿತ್ಯ ಹೊಸ,ಹೊಸ ವಿಷಯಗಳ ಬಗ್ಗೆ ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸಿದಾಗ ಮಾತ್ರ ಉತ್ತಮವಾದ ಜ್ಞಾನವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಾಲೇಜಿನ ಕನ್ನಡ ಉಪನ್ಯಾಸಕರಾದ ದೇವೇಂದ್ರಪ್ಪ ಪುಲದಿನ್ನಿ ಮಾತನಾಡಿದರು. ವಿವಿಧ ಚಟುವಟಿಕೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರಾದ ವಿರುಪಣ್ಣ ಪಾಟೀಲ್, ರಾಘವೇಂದ್ರ, ಆನಂದ ,ಹುಸೇನ್, ಶರಣಮ್ಮ, ಲಕ್ಷಿ ?ಮೇ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದರು.

# ಈರುಳ್ಳಿ ಬೆಲೆ ಕುಸಿತ ರೈತರಿಗೆ ಸಂಕಟ

**❏ ನೈಜ್ಯ ದೆಸೆ ನ್ಯೂಸ್**

**ಕವಿತಾಳ: ಈರುಳ್ಳಿ ಬೆಲೆ ಕ್ವಿಂಟಾಲ್‌ಗೆ 300–400 ಮಾರಾಟವಾಗುತ್ತಿದ್ದು ಬೆಲೆ ಕುಸಿತದಿಂದಾಗಿ ರೈತರು ಪರದಾಡುವಂತಾಗಿದ್ದು ಕೈಗೆ ಬಂದ ತುತ್ತು ಬಾಯಿಗೆಬಾರದಂತಾಗಿ ರೈತರಿಗೆ ಸಂಕಟ ಉಂಟಾಗಿದೆ. ಪಟ್ಟಣ ಸಮೀಪದ ವಟಗಲ್ ಗ್ರಾಮದ ರೈತ ಶರಣಪ್ಪ ಎನ್ನುವವರು ಒಂದು ಎಕರೆ ಹೊಲದಲ್ಲಿ ಈರುಳ್ಳಿ ಬಿತ್ತನೆ ಮಾಡಿದ್ದು ಬೆಲೆ ಇಳಿತದಿಂದಾಗಿ ತೊಂದರೆ ಅನುಭವಿಸುವಂತಗಿದೆ.**



ಈ ಕುರಿತು ಪತ್ರಿಕೆಯೊಂದಿಗೆ ಮತನಾಡಿದ ರೈತ ಶರಣಪ ಎನ್ 'ರೈತರು ಬೆಳೆದ ಬೆಳೆಗಳಿಗೆ ಬೆಲೆಯಿಲ್ಲದಂತಾಗಿದ್ದು ಒಂದು ಕ್ವಿಂಟಾಲ್‌ಗೆ 300–400 ಕೇಳುತ್ತಿದ್ದು, ಒಂದು ಎಕರೆಯಲ್ಲಿ ಈರುಳ್ಳಿ ಬಿತ್ತನೆ ಮಾಡಲು ಕೀಟನಾಶಕ, ಗೊಬ್ಬರ, ಕೂಲಿಕಾರರ ಕೂಲಿ ಸೇರಿದಂತೆ ಖರ್ಚು ಮಾಡಿದ ಹಣ ಸಹ ವಾಪಸ್ಸು ಬಾರದಂತಾಗಿದೆ, ಇದೆ ರೀತಿಯಾಗಿ ರೈತರು ಬೆಳೆದ ಬೆಳೆಗಳಿಗೆ ಬೆಲೆ ಸಿಗದೆ ಹೋದರೇ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಬಂದೊದಗಬಹುದು ಆದ್ದರಿಂದ ಸರ್ಕಾರ ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ನಿಡುವ ಮುಲಕ ಸಂಕಷ್ಟದಲ್ಲಿರುವ ರೈತರ ಹಿತ ಕಾಪಾಡಬೆಕು' ಎಂದು ತಮ್ಮ ಅಳಲನ್ನು ತೊಡಿಕೊಂಡಿದ್ದಾರೆ.

# ಕರವೇ ಹೆಚ್.ಶಿವರಾಮೇಗೌಡ ಬಣದಿಂದ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಕನ್ನಡ ಪ್ರಬಂಧ ಸ್ಪರ್ಧೆ

## ಆಸಕ್ತಿಯಿಂದ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ ಸರ್ಕಾರಿ ಶಾಲೆ ವಿದ್ಯಾರ್ಥಿಗಳು

**❏ ನೈಜ್ಯ ದೆಸೆ ನ್ಯೂಸ್**



**ಮಾನ್ವಿ: ಕರ್ನಾಟಕ ರಕ್ಷಣಾ ವೇದಿಕೆ ಹೆಚ್.ಶಿವರಾಮೇಗೌಡ ತಾಲೂಕ ಘಟಕ ವತಿಯಿಂದ 70ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ಸರ್ಕಾರಿ ಪ್ರೌಢಶಾಲೆ ಮಕ್ಕಳಿಗಾಗಿ 'ಕನ್ನಡ ನಾಡಹಬ್ಬ–ರಾಜ್ಯೋತ್ಸ ವದ ಅರ್ಥ ಮತ್ತು ಆಚರಣೆ' ವಿಷಯ ಕುರಿತು ಏರ್ಪಡಿಸಲಾಗಿದ್ದ ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಪ್ರೌಢಶಾಲೆ ಮಕ್ಕಳು ಆಸಕ್ತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಯಶಸ್ವಿಗೊಳಿಸಿದರು.**

ಇಂದು ಬೆಳಿಗ್ಗೆ ಪಟ್ಟಣದ ಶ್ರೀ ಪಂಪಾವಿರೂಪಾಕ್ಷೇಶ್ವರ ಅನುದಾನಿತ ಪ್ರೌಢ ಶಾಲೆ ಕಲ್ಮಠದಲ್ಲಿ ನಡೆದ ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಸರ್ಕಾರಿ ಬಾಲಕರ ಪ್ರೌಢಶಾಲೆ, ಕೋನಾಪುರಪೇಟೆ ಪ್ರೌಢಶಾಲೆ, ಬಾಲಕೀಯರ ಪ್ರೌಢಶಾಲೆ ಹಾಗೂ ಅನುದಾನಿತ ಕಲ್ಮಠ ಪ್ರೌಢಶಾಲೆ ಸೇರಿದಂತೆ ಪ್ರತಿ ಶಾಲೆಯಿಂದ ತಲಾ ಐದು ಮಕ್ಕಳು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ಕನ್ನಡ ನಾಡು, ನುಡಿ ಭಾಷಾ ಪ್ರಾಮುಖ್ಯತೆಯ ಕುರಿತು ಆಸಕ್ತಿಯನ್ನು ವ್ಯಕ್ತಪಡಿಸಿದರು.

ನಂತರ ಕರವೇ ಹೆಚ್.ಶಿವರಾಮೇಗೌಡ ಬಣದ ತಾಲೂಕ ಅಧ್ಯಕ್ಷ ನರಸಿಂಹ ಅವರು ಮಾತನಾಡಿ, ಶಾಲೆ ಮಕ್ಕಳಲ್ಲಿ ಕನ್ನಡ ಭಾಷಾ ಜ್ಞಾನದ ಜೊತೆಗೆ ಬರವಣಿಗೆಯ ಕುರಿತು ಆಸಕ್ತಿ ಹಾಗೂ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ನಮ್ಮ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಆಯೋಜಿಸಲಾಗಿದ್ದ ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಸೂಕ್ತ ಬಹುಮಾನ ಹಾಗೂ ಪ್ರಶಂಸನೀಯ ಪ್ರಯತ್ನವನ್ನು ನೀಡಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಕರವೇ ತಾಲೂಕ ಗೌರವಧ್ಯಕ್ಷ ಯಪ್ಪಲ್ಲ ನಿಲಾಗಲ್, ತಾ.ಪ್ರ. ಕಾರ್ಯದರ್ಶಿ ದೀಪಕ್ ಯಾದವ್, ನಗ ಘಟಕ ಅಧ್ಯಕ್ಷ ಮಹೇಂದ್ರ ನಾಯಕ, ಖಜಾಂಚಿ ವಿನಯ ಕುಮಾರ ವಿವಿಧ ಶಾಲೆಗಳ ಶಿಕ್ಷಕರಾದ ಸಂಜೀವಪ್ಪ ಚಲವಾದಿ, ಮಹಿಬೂಬ್ ಪಾಷ, ಶಿಕ್ಷಕಿ ಭ್ರಮರಾಂಭ, ಶ್ರೀಮತಿ ಕಟ್ಟಿ, ಫೈಮುದ್ದೀನ್ ಶರೀಫ್ ಉಪಸ್ಥಿತರಿದ್ದರು.



**❏ ನೈಜ್ಯ ದೆಸೆ ನ್ಯೂಸ್**

ರಾಯಚೂರು: ಜಿಲ್ಲೆಯ ದೇವದಾಸಿಯರ ಸ್ಥಿತಿಗತಿ ಹಾಗೂ ಪುನರ್ವಸ್ಥಿತಿ ಕಾರ್ಯಕ್ರಮದಲ್ಲಿ ಶಿಕ್ಷಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಕೊಡಮಾಡುವ ಉಚಿತ ಯೋಚನೆಗಳ ಸ್ಟಾಲ್ ಹಾಕಲಾಯಿತು. ಮಾನ್ಯ ಉಪ ನಿರ್ದೇಶಕರಾದ ಕೆ.ಡಿ ಬಡಿಗೇರ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಡಾ:ಈರಣ್ಣ ಕೋಸಗಿ, ಅಕ್ಷರ ದಾಸೋಹದ ಸಹಾಯಕ ನಿರ್ದೇಶಕರಾದ ಶ್ರೀನಿವಾಸ ಮರಡಿ, ಶಿಕ್ಷಣ ಸಂಯೋಜಕರಾದ ರಾಮಕೃಷ್ಣ

# ಕವಿತಾಳ–ಪೋಡಿ ಮುಕ್ತ ಗ್ರಾಮ ಅಭಿಯಾನಕ್ಕೆ ಚಾಲನೆ



**❏ ನೈಜ್ಯ ದೆಸೆ ನ್ಯೂಸ್**

**ಕವಿತಾಳ ಪಟ್ಟಣದ ನಾಡಾಕಾರ್ಯಾಲಯದಲ್ಲಿ ಇಂದು ಕಂದಾಯ ಮತ್ತು ಭೂ ದಾಖಲೆ ಇಲಾಖೆಗಳ ಸಹಯೋಗದಲ್ಲಿ ಪೋಡಿ ಮುಕ್ತ ಗ್ರಾಮ ಅಭಿಯಾನಕ್ಕೆ ಭೂ ದಾಖಲೆ ಇಲಾಖೆ ಸಹಾಯಕ ನಿರ್ದೇಶಕ ಮಹ್ಮದ್ ನೂರುದ್ದಿನ್ ಚಾಲನೆ ನೀಡಿದರು.**

ನಂತರ ಮಾತನಾಡಿದ ಅವರು 'ನೆನೆಗುದಿಗೆ ಬಿದ್ದಿರುವ ಪೋಡಿ ಪ್ರಕರಣಗಳಿಗೆ ಶಾಶ್ವತ ಪರಿಹಾರ ನೀಡಲು ಅಭಿಯಾನ ಆರಂಭಿಸಲಾಗಿದೆ, ಜಮೀನುಗಳ ಭೂ ಮಾಪನ ಮಾಡಿ ಪ್ರತ್ಯೇಕ ಪಹಣಿ ನೀಡಲಾಗುವುದು ಆದ್ದರಿಂದ ಜಮೀನುಗಳ ಮಾಲಿಕರು ಅಗತ್ಯ ದಾಖಲೆಗಳನ್ನು ನೀಡುವ ಮೂಲಕ ಅಭಿಯಾನದ ಯಶಶ್ವಿಗೆ ಸಹಕರಿಸುವುದರೊಂದಿಗೆ ರೈತರು ಅಭಿಯಾನದ ಪ್ರಯೋಜನ ಪಡೆದುಕೊಳ್ಳಬೇಕು'ಎಂದು ತಿಳಿಸಿದರು.

ಗ್ರಾಮ ಆಡಳಿತಾಧಿಕಾ–ರಿಗಳಾದ ಸದಾಕಲಿ ಹರಕೇರಿ,ಅನಿಲ್, ಭೂ ದಾಖಲೆಗಳ ತಪಾಸಕ ಮೈನುದ್ದಿನ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಮತ್ತು ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ರೈತರು ಉಪಸ್ಥಿತರಿದ್ದರು.

# ಸಂಘಟಿತ ಪ್ರಯತ್ನದಿಂದ ದೇವದಾಸಿ ಪದ್ಧತಿ ನಿರ್ಮೂಲನೆ: HC ನ್ಯಾಯಮೂರ್ತಿ ವಿಭು ಬಖ್ರು

**❏ ನೈಜ್ಯ ದೆಸೆ ನ್ಯೂಸ್**




**ರಾಯಚೂರು: ಸಂಘಟಿತ ಪ್ರಯತ್ನದಿಂದ ಮಾತ್ರ ದೇವದಾಸಿ ಆಚರಣೆಯಂತಹ ಅನಿಷ್ಠ ಪದ್ಧತಿಯನ್ನು ಬೇರು ಸಹಿತ ಕಿತ್ತೆಸೆಯಲು ಸಾಧ್ಯವಿದೆ' ಎಂದು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಧಾನ ಪೋಷಕರೂ ಆದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಅಭಿಪ್ರಾಯಪಟ್ಟರು.**

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ರಾಯಚೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ ಮತ್ತು ಜಿಲ್ಲಾ ವಕೀಲರ ಸಂಘದ ಆಶ್ರಯದಲ್ಲಿ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಶನಿವಾರ ಆಯೋಜಿಸಿದ್ದ ಬೃಹತ್ ಆರೋಗ್ಯ ಶಿಬಿರ ಹಾಗೂ ಕಾನೂನು ಸಾಕ್ಷರತಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. 'ಪೊಲೀಸ್ ಇಲಾಖೆ, ಸರ್ಕಾರೇತರ ಸಾಮಾಜಿ–ಕ ಸಂಘಟನೆಗಳು ಹಾಗೂ ಮಾಧ್ಯಮಗಳು ಅನಿಷ್ಠ ಪದ್ಧತಿಯ ನಿರ್ಮೂಲನೆಗೆ ಒಗ್ಗೂಡಿ ಕಾರ್ಯನಿರ್ವಹಿಸಬೇಕಾಗಿದೆ' ಎಂದು ತಿಳಿಸಿದರು.

'ರಾಜ್ಯದಲ್ಲಿ, ಈಗಾಗಲೇ ಮಾಜಿ ದೇವದಾಸಿಯರ ಸ್ಥಿತಿಗತಿ ಅರಿಯಲು ಸಮೀಕ್ಷೆ ನಡೆದಿದೆ. ಮಾನ್ವಿ, ಸಿಂಧನೂರ, ಮಸ್ಕಿ, ಸಿರವಾರ, ದೇವದುರ್ಗ, ಲಿಂಗಸುಗೂರು ಹಾಗೂ ರಾಯಚೂರು ತಾಲ್ಲೂಕುಗಳಲ್ಲಿ 3433 ದೇವದಾಸಿಯರ ಕುಟುಂಬಗಳಿವೆ. ಪುಸ್ತಕಗಳಲ್ಲಿ ಕಾನೂನು ಇದ್ದರೆ ಸಾಲದು, ಪದ್ಧತಿಯ ನಿರ್ಮೂಲನೆಗೆ ಪ್ರತಿಜ್ಞೆ ಮಾಡಬೇಕಿದೆ' ಎಂದು ಹೇಳಿದರು. 'ಕರ್ನಾಟಕ, ಮಹಾರಾಷ್ಟ್ರ ಹಾಗೂ ತೆಲಂಗಾಣದಲ್ಲಿ ಇಂದಿಗೂ ದೇವದಾಸಿ ಪದ್ಧತಿ ಆಚರಣೆಯಲ್ಲಿರುವ ಕಾರಣ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಸಮೀಕ್ಷೆ ಆರಂಭಿಸಿದೆ. ಬಲಿಷ್ಠ ಕಾನೂನುಗಳು ಇದ್ದರೆ ಸಾಲದು ಇದನ್ನು ಹೇಗೆ ಸಮರ್ಥ ರೀತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ ಎನ್ನುವುದರ ಮೇಲೆ ನಿರ್ಮೂಲನೆಯ ಅವಧಿ ಅವಲಂಬಿಸಿದೆ' ಎಂದರು.

ಹೈಕೋರ್ಟ್ ನ್ಯಾಯಮೂರ್ತಿ, ರಾಯಚೂರು ಜಿಲ್ಲೆಯ ಆಡಳಿತಾತ್ಮಕ ನ್ಯಾಯಾಧೀಶ ಎಂ.ಜಿ. ಶುಕುರೆ ಕಮಲ್ ಮಾತನಾಡಿ, 'ಹಿಂದಿನ ಕಾಲದಲ್ಲಿ ದೇವದಾಸಿ ಪದ್ಧತಿಯ ಉದ್ದೇಶ ಬೇರೆಯೇ ಇತ್ತು. ಮಹಿಳೆಯರು ದೇವತೆಗಳಿಗೆ ಅಲಂಕರಿಸಿ ಪೂಜೆ ಸಲ್ಲಿಸುವುದಾಗಿತ್ತು. ಕಾಲಾನಂತರದಲ್ಲಿ ಅದು ಬದಲಾಯಿತು. ಅನಿಷ್ಠ ಪದ್ಧತಿಯ ಸ್ವರೂಪ ಪಡೆಯಿತು' ಎಂದರು. ಸಮಾಜಕ್ಕೆ ಕಸದಂತಾಗಿರುವ, ಅಮಾನವೀಯ ದೇವದಾಸಿ ಪದ್ಧತಿಯನ್ನು ಬೇರು ಸಹಿತ ಕಿತ್ತೊಗೆಯುವ ಸಂಕಲ್ಪದೊಂದಿಗೆ ನಾವೆಲ್ಲ ಮುನ್ನುಗ್ಗಬೇಕಿದೆ' ಎಂದು ತಿಳಿಸಿದರು.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ಹೈಕೋರ್ಟ್ ನ್ಯಾಯಮೂರ್ತಿ ಅನು ಸಿವರಾಮನ್ ಮಾತನಾಡಿ, 'ದೇವದಾಸಿ ಪದ್ಧತಿ ನಿರ್ಮೂಲನೆಗೆ ರಾಜಕೀಯ ಇಚ್ಛಾಸಕ್ತಿಯೂ ಬೇಕು. ಸರ್ಕಾರದಿಂದ ಪ್ರತ್ಯೇಕ ಅನುದಾನವೂ ಬೇಕು. ಕಾನೂನು ಸೇವಾ ಪ್ರಾಧಿಕಾರ ಸಾಧ್ಯವಿರುವ ಎಲ್ಲ ರೀತಿಯ ಸಹಕಾರ ಕೊಡಲಿದೆ' ಎಂದರು. 'ಮಾಜಿ ದೇವದಾಸಿಯ ಸ್ಥಿತಿಗತಿ ಅರಿಯುವ ದಿಶೆಯಲ್ಲಿ ರಾಯಚೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾಡಳಿತ ಉತ್ತಮ ಕಾರ್ಯಕ್ರಮ ಆಯೋಜಿಸಿದೆ' ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಹೋರಾಗಾರ್ತಿ ಮೋಕ್ಷಮ್ಮ ಮಾತನಾಡಿ, 'ದೇವಾಲಯಗಳಲ್ಲಿ ದೇವರ ಸೇವೆ ಮಾಡುವ ಕಾರ್ಯಕ್ಕೆ ದೇವದಾಸಿ ಪದ್ಧತಿ ಎಂದು ಕರೆದರು. ಆ ದೇವದಾಸಿಯರನ್ನು ಲೈಂಗಿಕತೆಗೆ ಬಳಸಿಕೊಳ್ಳುವ ಪರಂಪರೆ ಮುಂದುವರೆಯಿತು.

ಇದು ಹಳ್ಳಿಹಳ್ಳಿಗೂ ವ್ಯಾಪಿಸಿತು. ಈ ಅನಿಷ್ಠ ಪದ್ಧತಿಯನ್ನು ತೊಲಗಿಸಲು ಸಂಘಟಿ–ತ ಹೋರಾಟ ಮಾಡಿದ್ದೇವೆ. ನಿವಾಸ, ನಿವಶೇನ ಹಾಗೂ ಮಾಸಾಶನದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದೇವೆ' ಎಂದು ತಿಳಿಸಿದರು.

ಆದೇಶ ಪತ್ರ ವಿತರಣೆ: ಜಿಲ್ಲಾ ಪಂಚಾಯಿತಿ ವತಿಯಿಂದ ಮನೆ ಮಂಜೂರಾತಿ ಆದೇಶ ಪತ್ರವನ್ನು ಹುಲಿಗೆಮ್ಮ ಮತ್ತು ಯಲ್ಲಮ್ಮ ಅವರಿಗೆ ವಿತರಿಸಲಾಯಿತು. ಸರೋಜಮ್ಮ, ನರಸಮ್ಮ ರಾಮವ್ವ ಅವರಿಗೆ ಮಾಜಿ ದೇವದಾಸಿ ಎನ್ನುವ ದೃಢೀಕರಣ ಪತ್ರ ನೀಡಲಾಯಿತು. ರಾಮಮ್ಮ ಹಾಗೂ ಬಸಮ್ಮ ಅವರಿಗೆ ಆದಾಯೋತ್ಪನ್ನ ಚಟುವಟಿಕೆಯ ಮತ್ತು ಲಕ್ಷ್ಮಿ ಮತ್ತು ಕೃಷ್ಣದೇವಿ ಅವರಿಗೆ ಕಾರ್ಮಿಕ ಇಲಾಖೆಯ ಆದೇಶದ ಪ್ರತಿ ವಿತರಿಸಲಾಯಿತು. ಪುಸ್ತಕ ಬಿಡುಗಡೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಕಟಿಸಿದ 18 ಮಕ್ಕಳ ಹಕ್ಕುಗಳು ಕಿರು ಹೊತ್ತಿಗೆ ಹಾಗೂ ಪೊಲೀಸ್ ಇಲಾಖೆ ಪ್ರಕಟಿಸಿದ ಜಾಗೃತಿ ಕೈಪಿಡಿಯನ್ನು ಸಹ ಬಿಡುಗಡೆಗೊಳಿಸಲಾಯಿತು.

## ಉದ್ಯೋಗ ಪ್ರಕಟಣೆ

ಕೊಪ್ಪಳ ಜಿಲ್ಲೆಯಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಕುಷ್ಟಗಿಯಲ್ಲಿ ಖಾಲಿ ಇರುವ 12–ಶುಶೂಷಾಧಿಕಾರಿಗಳ, 01–ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು ಹಾಗೂ 01–ಫಾರ್ಮಸಿಸ್ಟ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ 30/10/2025 ರಿಂದ 15–11–2025 ರವರೆಗೆ ಕೊಪ್ಪಳ ಜಿಲ್ಲಾ ವೆಬ್ ತಾಣ www.koppal.nic.in ನ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿತ್ತು. ಆದರೆ 31–10–2025 ರಿಂದ 04–11–2025 ರವರೆಗೆ ಅರ್ಜಿ ಸಲ್ಲಿಸಲು ತಾಂತ್ರಿಕ ದೋಷ ಕಂಡುಬಂದಿರುವುದ–ರಿಂದ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 15–11–2025 ನ್ನು ವಿಸ್ತರಿಸಿ 20–11–2025 ರವರೆಗೆ ಕಾಲಾವಕಾಶ ನೀಡಲಾಗಿದೆ. ಯಾವುದೇ ಕಾರಣಕ್ಕೂ ಆಫ್‌ಲೈನ್ ಮೂಲಕ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

# ಪೋಷಕರು ಶಿಕ್ಷಕರು ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಿ ಉತ್ತೇಜಿಸಬೇಕು; ರಮೇಶಬಾಬು ಯಾಳಗಿ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ; ಮಕ್ಕಳು ನಮ್ಮ ದೇಶದ ಭವಿಷ್ಯ, ನಾಳೆಯ ನಾಗರಿಕರು, ಮತ್ತು ನಾಯಕರಾಗಿರುವುದರಿಂದಾಗಿ ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಿ ಉತ್ತೇಜಿಸುವ ಕೆಲಸ ಪೋಷಕರು ಶಿಕ್ಷಕರು ಮಾಡುವುದು ಅಗತ್ಯವಾಗಿದೆ ಎಂದು ಸಾಹಿತಿ ರಮೇಶಬಾಬು ಯಾಳಗಿ ಅವರು ಹೇಳಿದರು. ಅವರು ಪಟ್ಟಣದ ಕಲ್ಮಠ ಪದವಿ ಪೂರ್ವ ಕಾಲೇಜಿನ ಎನ್ ಎಸ್ ಎಸ್ ಘಟಕದ ವತಿಯಿಂದ ಆಯೋಜಿಸಿದ್ದ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಮಕ್ಕಳಿಂದ ನಾವು ಪ್ರೀತಿಯನ್ನು ನಿರೀಕ್ಷಿಸಬೇಕಾದರೆ ನಾವು ಮೊದಲು ಅವರನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು. ಹೆತ್ತವರು ಮತ್ತು ಶಿಕ್ಷಕರು ಮಕ್ಕಳಿಗೆ ಮಾದರಿಯಾಗಬೇಕು. ಮಕ್ಕಳು ಸಹ ಪುಟ್ಟ ಪುಟ್ಟ ಕನಸುಗಳನ್ನು ಕಂಡು ಅವುಗಳನ್ನು ನನಸು ಮಾಡುವ ದೃಢವಾದ ಮನಸ್ಸನ್ನು ಹೊಂದಿ ಸತತ ಪ್ರಯತ್ನದಿಂದ ದೊಡ್ಡ ದೊಡ್ಡ ಸಾಧನೆ ಮಾಡಿ ಸಾಧಕರಾಗಬೇಕೆಂದು ಮಕ್ಕಳಿಗೆ ಯಾಳಗಿ ಅವರು ಕಿವಿ ಮಾತು ಹೇಳಿದರು. ಇದೇ ಸಂದರ್ಭದಲ್ಲಿ ಕಲ್ಮಠದ ಸುವರ್ಣ ದಸರಾ ಮಹೋತ್ಸವದ ಭವ್ಯ ಮೆರವಣಿಗೆಯಲ್ಲಿ ಸ್ತಬ್ಧ ಚಿತ್ರ ಪ್ರದರ್ಶನ ಗೈದ ವಿವಿಧ ಶಾಲೆಗಳ ವಿಜೇತ ವಿದ್ಯಾರ್ಥಿಗಳೊಂದಿಗೆ ಆಗಮಿಸಿದ್ದ ಶಿಕ್ಷಕರಿಗೂ ಸನ್ಮಾನಿಸಿ ಬಹುಮಾನ ವಿತರಿಸಲಾಯಿತು. ಕಾಲೇಜಿನ ಪ್ರಾಚಾರ್ಯ ಎಸ್.ಎಸ್.ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.




ಕಲ್ಮಠ ಪದವಿ ಕಾಲೇಜಿನ ಪ್ರಾಚಾರ್ಯ ಸಿದ್ದನಗೌಡ ಪಾಟೀಲ ಕಲ್ಮಠ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಹಿರಿಯ ಶಿಕ್ಷಕ ಕೇಮ್ಯಾನಾಯಕ ಮತ್ತು ವಿದ್ಯಾರ್ಥಿಗಳ ಪ್ರತಿನಿಧಿ ಕು.ಎಂ. ಸಾವಿತ್ರಿ ಹಾಗೂ ಗವಿರಾಜ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಲಾವಿಭಾಗದ ವಿದ್ಯಾರ್ಥಿನಿ ಕು.ದೇವಮ್ಮ ಪಂ. ಜವಹರಲಾಲ್ ನೆಹರೂ ಅವರ ಜೀವನ ಮತ್ತು ಸಾಧನೆ ಕುರಿತು ಅನಿಸಿಕೆ ವ್ಯಕ್ತಪಡಿಸಿದರು. ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಕು.ಮಹೇಶ್ವರಿ ಪ್ರಾರ್ಥನಾ ಗೀತೆ ಹಾಡಿದರು. ಎನ್ ಸಿ ಸಿ ಅಧಿಕಾರಿ ಹಾಗೂ ಹಿರಿಯ ದೈಹಿಕ ಶಿಕ್ಷಣ ಉಪನ್ಯಾಸಕ ವಿರುಪಣ್ಣ ಪಾಟೀಲ ಸ್ವಾಗತಿಸಿದರು. ಉಪನ್ಯಾಸಕ ಮಾರ್ಟಿನ್ ಕಾರ್ಯಕ್ರಮ ನಿರೂಪಿಸಿದರು. ರಾಷ್ಟ್ರೀಯ ಸೇವಾ ಯೋಜನಾ ಘಟಕದ ಕಾರ್ಯಕ್ರಮಾಧಿಕಾರಿ ನರಸಣ್ಣ ಸುಂಕೇಶ್ವರ ವಂದಿಸಿದರು.

## ನ್ಯಾಯವಾದಿಗಳ ಸಂಘದ ಅಧ್ಯಕ್ಷರಾಗಿ ಕೆ.ಭೀಮನಗೌಡ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಾ ನ್ಯಾಯವಾದಿಗಳ ಸಂಘಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕೆ.ಭೀಮನಗೌಡ 161 ಮತಗಳ ಅಂತರದಲ್ಲಿ ಜಯಭೇರಿ ಬಾರಿಸಿದ್ದಾರೆ.



ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕೆ.ಭೀಮನಗೌಡ ಅವರು 228 ಮತಗಳನ್ನು ಪಡೆದು ಜಯಶಾಲಿಯಾದರೆ, ಪ್ರತಿಸ್ಪರ್ಧಿ ಪಂಪಣ್ಣ ಮೇಟಿ ಕೇವಲ 67 ಮತಗಳನ್ನು ಪಡೆದು ಪರಾಭವಗೊಂಡರು. ಇನ್ನೂ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜಗದೀಶ 145 ಮತಗಳನ್ನು ಪಡೆದು ಗೆಲುವು ಸಾಧಿಸಿದರೆ, ಸುರೇಶ ರೆಡ್ಡಿ ಚನ್ನಳ್ಳಿ 109 ಮತ ಪಡೆದರೆ, ಲಲಿತಾ ಚೆಲ್ಲಾ ಅವರು 41 ಮತಗಳನ್ನು ಪಡೆದು ಸೋಲು ಕಂಡರು. ಇನ್ನೂ ಸಹಕಾರ್ಯದರ್ಶಿ ಸ್ಥಾನಕ್ಕೆ ನಡೆದ ಮತದಾನದಲ್ಲಿ ಹೀನಾ ಅಮ್ರೀನ್ ಅವರು 168 ಮತಗಳನ್ನು ಪಡೆದು ಅವರ ಪ್ರತಿಸ್ಪರ್ಧಿ ಗಿರಿಯಪ್ಪ(125 ಮತಗಳು) ಅವರನ್ನು 43 ಮತಗಳ ಅಂತರದಲ್ಲಿ ಸೋಲಿಸಿದರು. ನ್ಯಾಯವಾದಿಗಳ ಸಂಘದಲ್ಲಿ 320 ಮತದಾರರ ಪೈಕಿ 294 ಜನ ತಮ್ಮ ಹಕ್ಕು ಚಲಾಯಿಸಿದ್ದರು. ಒಂದು ಮತ ತಿರಸ್ಕಾರಗೊಂಡಿತ್ತು. ಇನ್ನೂ ಕಾರ್ಯದರ್ಶಿ ಸ್ಥಾನಕ್ಕೆ ದುರುಗೇಶ ತುರ್ವಿಹಾಳ ಹಾಗೂ ಖಜಾಂಚಿ ಸ್ಥಾನಕ್ಕೆ ಶೇಖರಪ್ಪ ಗಡದ್ ಅವಿರೋಧವಾಗಿ ಆಯ್ಕೆಯಾಗಿದ್ದರು.

## ವೈದ್ಯಸೇವಕ ಪ್ರಶಸ್ತಿ ಪುರಸ್ಕೃತರಾದ ಡಾ.ರಾಧಾಕೃಷ್ಣ ನಿಧನ

❑ ನೈಜ್ಯ ದೆಸೆ ನ್ಯೂಸ್




ಸಿಂಧನೂರಿನ ಖ್ಯಾತ ವೈದ್ಯರು , ಪದ್ಮ ನರ್ಸಿಂಗ್ ಹೋಂ ನ ಸಂಸ್ಥಾಪಕರು ಮತ್ತು "ವೈದ್ಯ ಸೇವಕ" ಪ್ರಶಸ್ತಿ ಪುರಸ್ಕೃತ ಡಾ.ರಾಧಾಕೃಷ್ಣ ರವರು ಅನಾರೋಗ್ಯದಿಂದ ನಿಧನರಾದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬ ಸದಸ್ಯರಿಗೆ ಅವರ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ..

ಸುದ್ದಿ ಹಾಗೂ ಜಾಹಿರಾತಿಗಾಗಿ ಸಂಪರ್ಕಿಸಿ
9902277588, 9880707587, 9008787586

# ಮಸ್ಕಿಯಲ್ಲಿ ಅಭಿವೃದ್ಧಿಗೆ ಹೊಸ ವೇಗ: ತಾಲ್ಲೂಕಿನ ವಿವಿಧ ಕಾಮಗಾರಿ ಪರಿಶೀಲಿಸಿದ :ಶಾಸಕ ಆರ್. ಬಸನಗೌಡ ತುರ್ವಿಹಾಳ



❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲ್ಲೂಕಿನ ಅಭಿವೃದ್ಧಿ ಕೆಲಸಗಳಿಗೆ ಮತ್ತಷ್ಟು ಬಲ ನೀಡುವ ಉದ್ದೇಶದಿಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಆರ್. ಬಸನಗೌಡ ತುರ್ವಿಹಾಳ ಅವರು ಶನಿವಾರ ಪಟ್ಟಣದ ವಿವಿಧ ಕಡೆಗಳಲ್ಲಿ ಪರಿಶೀಲನೆ ನಡೆಸಿದರು.**

ಮೊದಲು ಪಟ್ಟಣದಲ್ಲಿ ಸುಮಾರು 8 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ತಾಲ್ಲೂಕು ಆಡಳಿತದ ಪ್ರಜಾಸೌಧ ಕಟ್ಟಡವನ್ನು ಪರಿಶೀಲಿಸಿದ ಅವರು, ಕಾಮಗಾರಿ ಗುಣಮಟ್ಟ ಹಾಗೂ ಪ್ರಗತಿ ಕುರಿತು ಅಧಿಕಾರಿಗಳಿಂದ ವಿವರ ಪಡೆದು, "ಸಾರ್ವಜನಿಕ ಉಪಯೋಗದ ಪ್ರತೀ ಕಟ್ಟಡ ಸಮಯಕ್ಕೆ, ಗುಣಮಟ್ಟಕ್ಕೆ ಯಾವುದೇ??ವಿಲ್ಲದೆ ಪೂರ್ಣಗೊಳ್ಳಬೇಕು" ಎಂದು ಸ್ಪಷ್ಟ ಸೂಚನೆ ನೀಡಿದರು. ನಂತರ ಅವರು ಸರ್ಕಾರಿ ಪಬ್ಲಿಕ್ ಶಾಲೆಗೆ ದಿಢೀರ್ ಭೇಟಿ ನೀಡಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಅವರ ವಿದ್ಯಾಭ್ಯಾಸ, ತರಗತಿ ವಾತಾವರಣ, ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ವಿಚಾ–ರಿಸಿದರು. ಶಾಲೆಯ ಬಿಸಿಯೂಟ ಕೋಣೆ, ಅಡುಗೆ ವ್ಯವಸ್ಥೆ, ನೀರು?ಸ್ವಚ್ಛತೆ, ಮಕ್ಕಳ ಆರೋಗ್ಯದ ದೃಷ್ಟಿಯಿಂದ ಅಗತ್ಯ ಕ್ರಮಗಳು ಸರಿಯಾಗಿ ಅನುಸರಿಸಲಾಗುತ್ತಿರುವುದನ್ನು ಪರಿಶೀಲಿಸಿದರು. ಇದೆ ವೇಳೆ ಕಲ್ಯಾಣ ಸಾರಿಗೆ ಸಂಸ್ಥೆಯ ಘಟಕಕ್ಕೂ ಭೇಟಿ ನೀಡಿ ಕೆಲಸದ ವ್ಯವಸ್ಥೆಗಳು ಸರಿಯಾಗಿ ನಡೆಯುತ್ತಿವೆಯೇ ಎಂದು ಪರಿಶೀಲಿಸಿದರು. ಪರಿಶೀಲನಾ ಪ್ರವಾಸದಲ್ಲಿ ಪುರಸಭೆ ಸದಸ್ಯರು ದೊಡ್ಡ ಕರಿಯಪ್ಪ, ಶಿವು ಬ್ಯಾಳಿ, ಕೃಷ್ಣ ಡಿ. ಚಿಗರಿ, ನಾರಾಯಣಪ್ಪ ಕಾಸ್ಲಿ, ಮಲ್ಲಯ್ಯ ಮುರಾರಿ, ಶಿವರೆಡ್ಡಿ, ರವಿ ಮಡಿವಾಳ, ನಾಗರಾಜ ಗುಡಿಸಲಿ ಸೇರಿದಂತೆ ಸ್ಥಳೀಯ ನಾಯಕರೂ, ಅಧಿಕಾರಿಗಳೂ ಭಾಗವಹಿಸಿದರು.

# ದೇಶದ ಟಾಪ್–3 ಮಾದರಿ ಪೊಲೀಸ್ ಠಾಣೆಯಲ್ಲಿ ರಾಯಚೂರಿನ ಕವಿತಾಳ ಸ್ಟೇಷನ್ ಕೇಂದ್ರ ಗೃಹ ಇಲಾಖೆಯಿಂದ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು: ಜಿಲ್ಲೆಯ ಸಿರವಾರ (Sirwar) ತಾಲೂಕಿನ ಕವಿತಾಳ ಪೊಲೀಸ್ ಠಾಣೆ (Kavital Police Station) ಕರ್ನಾಟಕ ಪೊಲೀಸ್ ಇಲಾಖೆಗೆ ಗೌರವ ಹೆಚ್ಚಿಸಿದೆ. 2025ರ ಸಾಲಿನಲ್ಲಿ ದೇಶದ ಟಾಪ್ 3 ಮಾದರಿ ಠಾಣೆಗಳಲ್ಲಿ ಕವಿತಾಳ ಪೊಲೀಸ್ ಸ್ಟೇಷನ್ ಸ್ಥಾನ ಪಡೆದಿದೆ.**

ದೇಶದ 10 ಠಾಣೆಗಳಿಗೆ ರ‍್ಯಾಂಕ್ ನೀಡಿರುವ ಕೇಂದ್ರ ಗೃಹ ಇಲಾಖೆ ಕವಿತಾಳ ಠಾಣೆಯನ್ನ ಟಾಪ್–3ರಲ್ಲಿ ಆಯ್ಕೆ ಮಾಡಿದೆ. ಜನ ಸಂಪರ್ಕ, ಪೊಲೀಸ್ ಠಾಣಾ ಕಟ್ಟಡದ ಸುವ್ಯವಸ್ಥೆ, ಸಿಬ್ಬಂದಿ ಶಿಸ್ತು ಮತ್ತು ಕಾರ್ಯದಕ್ಷತೆ, ಕಡತಗಳ ವಿಲೇವಾರಿ, ಮೂಲಭೂತ ಸೌಕರ್ಯಗಳು ಸೇರಿದಂತೆ ವಿವಿಧ ಮಾನದಂಡಗಳ ಆಧಾರದ ಮೇಲೆ ಆಯ್ಕೆ ಮಾಡಿದೆ




ರ‍್ಯಾಂಕ್ ಹಿನ್ನೆಲೆ ಕವಿತಾಳ ಠಾಣೆಗೆ ಕೇಂದ್ರ ಸರ್ಕಾರದಿಂದ ವಿಶೇಷ ಸೌಲಭ್ಯಗಳು ದೊರೆಯಲಿವೆ. ಪೀಠೋಪಕರಣ, ಲ್ಯಾಪ್‌ಟಾಪ್ ಸೇರಿದಂತೆ ಕೇಂದ್ರದಿಂದ ವಿಶೇಷ ಸೌಲಭ್ಯಗಳು ಸಿಗಲಿವೆ. ಜಿಲ್ಲೆಯ ಬಳಗಾನೂರು ಹಾಗೂ ಕವಿತಾಳ ಪೊಲೀಸ್ ಠಾಣೆಗಳು ಈ ಸ್ಪರ್ಧೆಯಲ್ಲಿದ್ದವು. ಅಂತಿಮವಾಗಿ ಕವಿತಾಳ ಪೊಲೀಸ್ ಠಾಣೆ ದೇಶದ ಟಾಪ್–3 ಠಾಣೆಯ ಪಟ್ಟಿಗೆ ಸೇರಿದೆ.

ನ.28ರಂದು ಐಐಎಂ ರಾಯಪುರ್‌ನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವರಿಂದ ಕವಿತಾಳ ಠಾಣೆ ಪಿಎಸ್‌ಐ ಗುರುಚಂದ್ರ ಯಾದವ್ ಟ್ರೋಫಿ ಸ್ವೀಕರಿಸಲಿದ್ದಾರೆ. ಇದಕ್ಕೂ ಮುನ್ನ 2021ರ ಸಾಲಿನಲ್ಲಿ ಮಾನ್ವಿ ಪೊಲೀಸ್ ಠಾಣೆ ಟಾಪ್–5ನೇ ಸ್ಥಾನ ಪಡೆದಿತ್ತು. ಈಗ ಕವಿತಾಳ ಠಾಣೆ ಟಾಪ್–3ನೇ ಸ್ಥಾನ ಪಡೆದಿದೆ

## ಶ್ರೀ, ಎನ್.ಎಮ್. ಬಿರಾದಾರ ರವರಿಂದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಒಂದುದಿನದ ಉಚಿತ ತರಬೇತಿ ಕಾರ್ಯಾಗಾರ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಕಲ್ಮಠ ಗುರುಭವನದಲ್ಲಿ ನ.17 ರಂದು ಬೆಳಿಗ್ಗೆ 9ಕ್ಕೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಬೆಂಗಳೂರು ತಾಲೂಕು ಘಟಕ ಮಾನ್ವಿ ಹಾಗೂ ಅ.ಖಿ.ಭಾ,ವೀ,ಲಿಂ,ಮಹಾಸಭಾ ಮಾನ್ವಿ ,ಸಿರವಾರ,ಕವಿತಾಳ, ತಾ.ಮಾಧ್ಯಮ ಸಮಿತಿ,**

ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳ ಒಕ್ಕೂಟ ಮಾನ್ವಿ ಘಟಕ, ಖಾಸಗಿ ಕಾಲೇಜುಗಳ ಉಪನ್ಯಾಸಕರ ಸಂಘ ಮಾನ್ವಿ ತಾ. ಘಟಕ, ಕಲ್ಮಠ ಶಿಕ್ಷಣ ಸಮೂಹ ಸಂಸ್ಥೆಗಳ ಸಂಂ–ಯುಕ್ತಾಶ್ರಯದಲ್ಲಿ ವಿಶೇಷ ಸಂಪನ್ಮೂಲ ವ್ಯಕ್ತಿಗಳಾದ ವಿಜಯಪುರ ಚಾಣಕ್ಯ ಕರಿಯರ್ ಅಕಾಡೆಮಿ ಸಂಸ್ಥಾಪಕರಾದ ಶ್ರೀ, ಎನ್.ಎಮ್. ಬಿರಾದಾರ ರವರಿಂದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಒಂದುದಿನದ ಉಚಿತ ತರಬೇತಿ ಕಾರ್ಯಗಾರ ನಡೆಯಲಿದ್ದು ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಕಲ್ಮಠ ಶ್ರೀ ವೀರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಲಿದ್ದು.

ಮಾನ್ವಿ ತಾ.ಪಂ. ಇ.ಓ. ಶ್ರೀ. ಪುರುರಾಜ್ ಸಿಂಗ್ ಸೋಲಂಕಿ ಐ.ಎ.ಎಸ್. ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ತಹಸೀಲ್ದಾರ್ ಶ್ರೀ ಭೀಮರಾಯ ಬಿ.ರಾಮಸಮುದ್ರ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ತಾ.ಪಂ.ಸಹಾಯಕ ನಿರ್ದೇಶಕರಾದ ಖಾಲೀದ್ ಅಹ್ಮದ್,ಪಿ.ಐ. ಸೋಮಶೇಖರ ಎಸ್. ಕೆಂಚರೆಡ್ಡಿ, ಕಲ್ಮಠ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾ–ರಿಗಳಾದ ಸಂಗಯ್ಯಸ್ವಾಮಿ, ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳ ಒಕ್ಕೂಟದ ತಾ.ಅಧ್ಯಕ್ಷರಾದ ತಿಪ್ಪಣ್ಣ ಬಾಗಲವಾಡ, ಖಾಸಗಿ ಕಾಲೇಜುಗಳ ಉಪನ್ಯಾಸಕರ ಸಂಘ ಮಾನ್ವಿ ತಾ. ಘಟಕದ ಅಧ್ಯಕ್ಷರಾದ ಆಂಜನೇಯ್ಯ ನಸಲಾಪುರ, ಸೇ–ರಿದಂತೆ ತಾ.ವಿವಿಧ ಕಾಲೇಜುಗಳ ಆಡಳಿತ ಮಂಡಳಿಗಳ ಅಧ್ಯಕ್ಷರು, ಪ್ರಾಂಶುಪಾಲರು, ಉಪನ್ಯಾಸಕರು, ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಅ.ಖಿ.ಭಾ,ವೀ,ಲಿಂ,ಮಹಾಸಭಾ ಮಾನ್ವಿ ತಾ.ಘಟಕದ ಅಧ್ಯಕ್ಷರಾದ ಅರುಣ್ ಚಂದಾ ಹಾಗೂ ಅ.ಭಾ,ವೀ,ಲಿಂ,ಮಹಾಸಭಾ ಮಾಧ್ಯಮ ಸಮಿತಿ ಅಧ್ಯಕ್ಷರಾದ ರಾಜಶೇಖರ ಸ್ವಾಮಿ ಎಂ.ಹೆಚ್.ಎಂ ಪ್ರಕಟಣೆಯಲ್ಲಿ ಕೋರಿದ್ದಾರೆ.

# ಹುಡಾ ಸರ್ಕಾರಿ ಶಾಲೆಯಲ್ಲಿ ಖಾಯಂ ಶಿಕ್ಷಕರನ್ನು ನೇಮಿಸಲು ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ತಾಲೂಕಿನ ಹುಡಾ ಗ್ರಾಮದ ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಖಾಯಂ ಶಿಕ್ಷಕರ ಕೊರತೆಯಿದೆ. ಇದರಿಂದಾಗಿ ಮಕ್ಕಳು ಈ ಗ್ರಾಮದ ಶಾಲೆಯನ್ನು ತೊರೆದು ಬೇರೆಡೆಗೆ ಹೋಗುವುದನ್ನು ನಾವೆಲ್ಲರೂ ತಡೆಯಬೇಕಾಗಿದೆ. ಶಿಕ್ಷಕರು, ಪೋಷಕರು, ಪಾಲಕರು, ಎಸ್.ಡಿ.ಎಮ್.ಸಿ.ಅಧ್ಯಕ್ಷರು, ಹಾಗೂ ಉಪಾಧ್ಯಕ್ಷರು, ಸದಸ್ಯರು, ಬಿಇಒ ಕಚೇ–ರಿಗೆ ಮುತ್ತಿಗೆ ಹಾಕುವ ಕೆಲಸ ಮಾಡುತ್ತೇವೆ ಎಂದು ಗ್ರಾಮದ ಹಿರಿಯರಾದ ತಿಮ್ಮಪ್ಪ ನಾಯಕ ಹೇಳಿದರು.**

ತಾಲೂಕಿನ ಹುಡಾ ಗ್ರಾಮದ ಸರ್ಕಾರಿ ಉನ್ನತಿಕರಿಸಿದ ಹಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಕರ ಕೊರತೆಯಿಂದ ಬೇಷತ್ತ ಗ್ರಾಮದ ಜನರು ಇಂದು ಶಾಲೆಯ ಮುಂದೆ ಪ್ರತಿಭಟಿಸಿ ಖಾಯಂ ಶಿಕ್ಷಕರ ನೇಮಕಾತಿಗೆ ಪಟ್ಟು ಹಿಡಿದು, ನಾಲ್ಕೈದು ದಿನ ಗಡುವು ನೀಡಿದರು. 1 ರಿಂದ 10 ನೇ ತರಗತಿಯವರೆಗೆ 210 ಮಕ್ಕಳಿದ್ದು, ಒಬ್ಬ ಶಿಕ್ಷಕಿ ಹಾಗೂ ಮುಖ್ಯಗುರುಗಳಿದ್ದಾರೆ. ಬಿಟ್ಟರೆ 6 ಜನ ಅತಿಥಿ ಶಿಕ್ಷಕರಿಂದಲೇ ಪಾಠ ಪ್ರವಚನ ನಡೆಯುತ್ತಿದೆ. ಈಗಿರುವ ಹೆಚ್ಚುವರಿ ಮುಖ್ಯಗುರುಗಳಾದ ಅಂಬಣ್ಣ ಅವರು ಸಹ ಈಗಾಗಲೇ ಮಲ್ಲಾಪುರ ಗ್ರಾಮಕ್ಕೆ ವರ್ಗಾವಣೆ ಗೊಂಡಿದ್ದಾರೆ. ಇವರು ಹೋದ ಮೇಲೆ ಬರೀ ಅತಿಥಿ ಶಿಕ್ಷಕರೊಂದೆ ಉಳಿಯುವಂತಾಗುತ್ತದೆ. ಹೀಗಾಗಿ ಅತಿಥಿ ಶಿಕ್ಷಕರ ಮೇಲೆ ಪಾಲಕರು ನಂಬಿಕೆ ಇಡದೆ ತಮ್ಮ ಮಕ್ಕಳನ್ನ ಬೇರೆಡೆಗೆ ಕಳಿಸುವಂತಹ ಕೆಲಸ ಆಗುತ್ತಿದೆ.



ಹೀಗಾಗಿ ಹುಡಾ ಗ್ರಾಮದ ಶಾಲೆ ಮುಚ್ಚುವ ಹಂತಕ್ಕೆ ಬಂದರೂ ಬರಬಹುದು. ಕಾರಣ ಕಡಿಮೆಯೆಂದರೂ 4 ಜನ ಖಾಯಂ ಶಿಕ್ಷಕರನ್ನಾದರೂ ತಕ್ಷಣವೇ ನೇಮಕ ಮಾಡಿ ಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ಒತ್ತು ಕೊಡಬೇಕೆಂದು ಒತ್ತಾಯಿಸಿದರು.



ನಂತರ ಎಸ್.ಡಿ.ಎಮ್.ಸಿ.ಸದಸ್ಯ ಜಿಲಾನಿಪಾಷಾ ಮಾತನಾಡಿ, 270 ಸಂಖ್ಯೆಯಲ್ಲಿದ್ದ ವಿದ್ಯಾರ್ಥಿಗಳು ಈಗ 210 ಕ್ಕೆ ಬಂದಿದೆ. ಕಾರಣ ಶಾಲೆಯಲ್ಲಿ ಶಿಕ್ಷಕರ ಕೊರತೆ ಮೊದಲೆಲ್ಲ 8 ಜನ ಶಿಕ್ಷಕ–ರಿದ್ದರು. ಅನಿವಾರ್ಯ ಕಾರಣಗಳಿಂದ ಅವರು ಟ್ರಾನ್ಸ್ಫರ್ ತೆಗೆದುಕೊಂಡು ಹೋಗಿದ್ದಾರೆ. ಉಳಿದಿದ್ದು 2 ಜನ ಶಿಕ್ಷಕರು ಮಾತ್ರ ಇವರ ಜೊತೆಗೆ 6 ಜನ ಅತಿಥಿ ಶಿಕ್ಷಕರನ್ನು ಕೊಟ್ಟಿದ್ದಾರೆ. ಎಸ್.ಡಿಎಂಸಿಯಿಂದ ವಿರೋಧ ಮಾಡಿದ್ದೇವು ಕಾರಣ ಅತಿಥಿ ಶಿಕ್ಷಕರಿಂದ ಮಕ್ಕಳಿಗೆ ಉತ್ತಮ ಕಲಿಕೆಯಂತೂ ಆಗುವುದಿಲ್ಲ ಖಾಯಂ ಶಿಕ್ಷಕರನ್ನು ನೇಮಕ ಮಾಡಲು ಹೋರಾಟ ಮಾಡಿದರು ಸಹ ಅಧಿಕಾರಿಗಳು ಗಮನ ಹರಿಸುತ್ತಿಲ್ಲ.

ಅತಿಥಿ ಶಿಕ್ಷಕರನ್ನ ಅಲ್ಲಗಳೆಯುವುದಿಲ್ಲ ಅವರ ಪ್ರತಿಭೆ ತಕ್ಕಹಾಗೆ ಪಾಠ ಮಾಡುತ್ತಿದ್ದಾರೆ. ಆದರೆ ಇಲ್ಲಿ ಇಷ್ಟು ದೊಡ್ಡ ಶಾಲೆಯಿದ್ದರು ಹಾಗೂ ಪಕ್ಕದ ಉರ್ದು ಶಾಲೆಯಲ್ಲಿ ಕೂಡ ಇದೆ ಸಮಸ್ಯೆಯಿದೆ. ಈ ಎರಡು ಶಾಲೆಯಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಖಾಯಂ ಶಿಕ್ಷಕರು ಇಲ್ಲ. ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಿ.ಆರ್.ಸಿ, ಡಿಡಿಪಿಐ, ಈ ಹುಡಾ ಗ್ರಾಮದ ಮಕ್ಕಳಿಗೆ ಶಿಕ್ಷಣದ ಕೊರತೆ ನೀಗಿಸಲು ಇನ್ನೊಂದು ಮೂರ್ನಾಲ್ಕು ದಿನದಲ್ಲಿ ಎರವಲು ಶಿಕ್ಷಕರನ್ನು ಕಳಿಸಿ ಉನ್ನತ ಶಿಕ್ಷಣ ಕೊಡುವ ವ್ಯವಸ್ಥೆ ಮಾಡದೆ ಇದ್ದರೆ ಮುಂದಿನ ದಿನಗಳಲ್ಲಿ ಕ್ಷೇತ್ರ ಶಿಕ್ಷಣ ಕಾರ್ಯಾಲಯದ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ: ಎಸ್.ಡಿಎಮ್.ಸಿ.ಅಧ್ಯಕ್ಷ ಸಣ್ಣಪ್ಪ ಆಚಾರಿ, ಉಪಾಧ್ಯಕ್ಷ ಜಹೀರ್ ಪಾಷಾ, ಮಾಜಿ ಗ್ರಾ.ಪಂ. ಅಧ್ಯಕ್ಷ ಸಿದ್ದನಗೌಡ ಜಾಲಿಹಾಳ, ಎಸ್.ಡಿ.ಎಮ್.ಸಿ ಸದಸ್ಯರಾದ ರಾಮಕೃಷ್ಣ ಬೆಳ್ಳಿಗುಂಡಿ, ಖಾಜಾಸಾಬ್,

# ಶಿಕ್ಷಣ ಮಾರ್ಗದರ್ಶಿ ವಿಶೇಷ

## MBBS ಕೋರ್ಸ್

MBBS ಒಂದು ಅತ್ಯಂತ ಗೌರವಾನ್ವಿತ ಕೋರ್ಸ್ ಆಗಿದ್ದು, ಮಾನವ ಆರೋಗ್ಯ ಸೇವೆಗೆ ಅತ್ಯುತ್ತಮ ಅವಕಾಶ ನೀಡುತ್ತದೆ. ಪರಿಶ್ರಮ, ಧೈರ್ಯ ಮತ್ತು ಸೇವಾ ಮನೋಭಾವ ಇದ್ದರೆ ಈ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಬಹುದು. ಭಾರತದ ಒಟ್ಟು 708 MBBS ಕಾಲೇಜಗಳು ಕರ್ನಾಟಕದಲ್ಲಿ 71 MBBS ಮೆಡಿಕಲ್ ಕಾಲೇಜುಗಳಿವೆ. ರಾಯಚೂರ ಜಿಲ್ಲೆಯಲ್ಲಿ 2 MBBS ಕಾಲೇಜುಗಳಿವೆ.

MBBS Bachelor of Medicine and Bachelor of Surgery (ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸೆಯ ಪದವಿ)

**ಕೋರ್ಸ್ ಅವಧಿ:** ಒಟ್ಟು 5 ವರ್ಷ 6 ತಿಂಗಳು (5.5 years) 4.5 ವರ್ಷಗಳು ತರಗತಿ ಅಧ್ಯಯನ (theoretical&practical) 1ವರ್ಷ ಇಂಟರ್ನ್ಶಿಪ್ (Internship) ಆಸ್ಪತ್ರೆಯಲ್ಲಿ ಕಡ್ಡಾಯ ಪ್ರಾಯೋಗಿಕ

**ತರಬೇತಿ ಅರ್ಹತೆ** (Eligibility Criteria): ಶೈಕ್ಷಣಿಕ ಅರ್ಹತೆ: 12ನೇ ತರಗತಿ (PUC/10+2) ನಲ್ಲಿ Physics, Chemistry, Biology (PCB) ಮತ್ತು English ವಿಷಯಗಳು ಕಡ್ಡಾಯ, ಕನಿಷ್ಠ 50% ಅಂಕಗಳು (SC/ST/OBC ಅಭ್ಯರ್ಥಿಗಳಿಗೆ 40% ಅಂಕಗಳು). ಪ್ರವೇಶ ಪರೀಕ್ಷೆ (Entrance Exam) NEET-UG (National Eligibility cum Entrance Test) ಪರೀಕ್ಷೆಯ ತೇರ್ಗಡೆಯಾಗಬೇಕು, ಈ ಪರೀಕ್ಷೆಯ ಮೂಲಕ ಭಾರತದಲ್ಲಿ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಿಗೆ ಪ್ರವೇಶ ದೊರೆಯುತ್ತದೆ.

**ವಯೋಮಿತಿ** (Age Limit): ಕನಿಷ್ಠ ವಯಸ್ಸು: 17 ವರ್ಷ (ಪ್ರವೇಶ ಸಮಯದಲ್ಲಿ) ಗರಿಷ್ಠ ವಯಸ್ಸು: 25 ವರ್ಷ (ಸಾಮಾನ್ಯ) / 30 ವರ್ಷ (SC/ST/OBC) ಇಂಟರ್ನ್ಶಿಪ್ ಅವಧಿ (Internship): ಅಂತಿಮ ವರ್ಷದ ನಂತರ 1 ವರ್ಷ ಕಡ್ಡಾಯ ಇಂಟರ್ನ್ಶಿಪ್ ಆಸ್ಪತ್ರೆಯಲ್ಲಿ ಮಾಡಬೇಕು.,

**MBBS ನಂತರ ಅವಕಾಶಗಳು** (Career Opportunities) : Postgraduate Studies (MD/MS) ವೈದ್ಯಕೀಯ ವಿಭಾಗಗಳಲ್ಲಿ MD/MS ಉನ್ನತ ಶಿಕ್ಷಣ ಮಾಡಬಹುದು., IAS , KAS ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಅವಕಾಶ. Government / Private Hospitals: ಸರಕಾರಿ ಹಾಗೂ ಖಾಸಗಿ ವೈದ್ಯರಾಗಿ ಕೆಲಸ ಮಾಡಲು ಅವಕಾಶ. Research / Teaching: ವೈದ್ಯಕೀಯ ಸಂಶೋಧನೆ ಅಥವಾ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸುವುದು. Army Medical Services / Civil Services: ರಕ್ಷಣಾ ವಿಭಾಗ ಅಥವಾ ಆಡಳಿತಾತ್ಮಕ ಹುದ್ದೆಗಳು. Private Practice: ಸ್ವಂತ ಕ್ಲಿನಿಕ್ ಅಥವಾ ಆಸ್ಪತ್ರೆ ಆರಂಭಿಸಬಹುದು.

# ಬಳಗಾನೂರಿನ ಸರಕಾರಿ ಪ್ರೌಢಶಾಲೆಯಲ್ಲಿ ಪಾಲಕ ಶಿಕ್ಷಕರ ಮಹಾಸಭೆ ಯಶಸ್ವಿ

**ನೈಜ್ಯ ದೆಸೆ ನ್ಯೂಸ್**

**ಬಳಗಾನೂರು: ಸರಕಾರದ ಮಹತ್ವಾಕಾಂಕ್ಷಿ ಕಾರ್ಯಕ್ರಮವಾಗಿದ್ದ ಪಾಲಕ ಮತ್ತು ಶಿಕ್ಷಕರ ಮಹಾಸಭೆ ಬಳಗಾನೂರಿನ ಸರಕಾರಿ ಪ್ರೌಢಶಾಲಾ ಆವರಣದಲ್ಲಿ ಶುಕ್ರವಾರ ಬೆಳಿಗ್ಗೆ ಮಕ್ಕಳದಿನಾಚರಣೆ ಯೊಂದಿಗೆ ಮುಖ್ಯೋಪಾಧ್ಯಾಯನಿ ಮಹಾದೇವಮ್ಮರವರ ನೇತೃತ್ವದಲ್ಲಿ ಶಾಲಾ ಅಭಿವೃದ್ಧಿ ಸಮಿತಿಯ ಸಹಕಾರದಲ್ಲಿ,ಸಿ,ಆರ್,ಸಿ,ಹಾಗೂ ಮೇಲಾಧಿಕಾರಿಗಳ ಮೇಲುಸ್ತುವಾರಿಯಲ್ಲಿ,ಊರಿನ ಮುಖಂಡರ ಉಪಸ್ಥಿತಿ, ಶಿಕ್ಷಕ ,ಶಿಕ್ಷಕಿ,ಭೋಧಕೇತರಸಿಬ್ಬಂಧಿ ಮತ್ತು ಪಾಲಕರ ಸಹಭಾಗಿತ್ವದಲ್ಲಿ ಅತ್ಯಂತ ವ್ಯವಸ್ಥಿತವಾಗಿ ಆಯೋಜನೆಗೊಂಡು ಅರ್ಥಪೂರ್ಣವಾದ ಮತ್ತು ಯಶಸ್ವಿ ಕಾರ್ಯಕ್ರಮವೆನಿಸಿಕೊಂಡಿತು.**

ಬೆಳಿಗ್ಗೆ ಉದ್ಘಾಟನೆಯೊಂದಿಗೆ ಆರಂಭವಾದ ಕಾರ್ಯಕ್ರಮ ಶಾಲೆಯ ನಳ ಬಳಕೆ,ಶಾಲೆಯ ಸ್ವಚ್ಛತೆ ಮತ್ತು ಶಿಸ್ತಿನ



ಪರಿಶೀಲನೆ, ಸಂವಹನ,ತಂತ್ರಜ್ಞಾನ ಬಳಕೆ, ಶಾಲೆಯ ಅಭಿವೃದ್ಧಿ ಯೋಜನೆಗಳ ಚರ್ಚೆ, ಶಾಲಾ ಮೂಲಭೂತ ಸೌಲಭ್ಯಗಳು ಸುರಕ್ಷತೆ ಮಾನದಂಡಗಳ ಪರಿಶೀಲನೆ, ಮಕ್ಕಳ ಕಲಿಕಾ ಮಟ್ಟ ಮೌಲ್ಯಮಾಪನ, ವಿದ್ಯಾರ್ಥಿಗಳ ಹಾಜರಾತಿ,ಶಿಸ್ತು, ಸಮವಸ್ತ್ರ,ಆರೋಗ್ಯ, ಸ್ವಚ್ಛತೆ, ಶಿಕ್ಷಕರ ಪಾಠ ಯೋಜನೆ, ಪಠ್ಯಪುಸ್ತಕ ಬಳಕೆ,ಕ್ರಿಯಾಶೀಲ ಕಲಿಕೆ, ಪೋಷಕರ ಸಭೆ, ಕಾರ್ಯಕ್ರಮಗಳು ಮತ್ತು ಮುಂದಿನ ಯೋಜನೆ, ಮಕ್ಕಳ ಹಕ್ಕುಗಳು ಮತ್ತು ರಕ್ಷಣೆ ಕುರಿತು ಜಾಗೃತಿ, RTE ಕಾಯ್ದೆ ಕುರಿತು ವಿವರಣೆ, ಮಕ್ಕಳ ಹಕ್ಕುಗಳ ನೀತಿ, POCSO ಕಾಯ್ದೆ ಕುರಿತು ಜಾಗೃತಿ, ಬಾಲಕರ ಮತ್ತು ಬಾಲಕಿಂುರ ಸುರಕ್ಷತಾ ಕ್ರಮಗಳ ಪರಿಶೀಲನೆ, ಶಾಲಾ ಸೌಲಭ್ಯಗಳ ಬಳಕೆ ಮತ್ತು ಅವಲೋಕನ, ಶಾಲಾ ಅಭಿವೃದ್ಧಿಗೆ ಪೋಷಕರ ಸಲಹೆಗಳ ಸ್ವೀಕೃತಿ, ವಿದ್ಯಾರ್ಥಿಗಳ ಸಾಧನೆ ಕುರಿತ ಚರ್ಚೆ ಮಾಡುವ ಮೂಲಕ ಮುಕ್ತಾಯವಾಯಿತು. ಈ ಕಾರ್ಯಕ್ರಮದಲ್ಲಿ ಊರಿನ ಮುಖಂಡರು,ಮುಖ್ಯೋಪಾಧ್ಯಾಯರು,ಶಾಲಾ ಅಭಿವೃದ್ಧಿ ಮಂಡಳಿಯ ಪದಾಧಿಕಾರಿಗಳು, ಶಿಕ್ಷಕ ಶಿಕ್ಷಕಿಂುರು,ವಿದ್ಯಾರ್ಥಿಗಳು, ಪಾಲಕರು,ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಾತನಾಡಿ ತಮ್ಮ ಸಲಹೆ ಸೂಚನೆಗಳನ್ನು ನೀಡಿದರು. ಈಗಲಾದರೂ ಜನ ಖಾಸಗಿ ಶಾಲಾ ಕಾಲೇಜುಗಳ ವ್ಯಾಮೋಹದಿಂದ ಹೊರಬಂದು ಸರಕಾರಿಶಾಲೆಗಳಿಗೆ ಮಕ್ಕಳನ್ನು ಸೇರಿಸಿ ಸರಕಾರಿಶಾಲೆಗಳ ಪ್ರಗತಿಗೆ ಮುಂದಾದರೆ ಮಾತ್ರ ಸರಕಾರದ ಈ ಕಾರ್ಯಕ್ರಮಗಳು ಫಲನೀಡಿದಂತಾಗುತ್ತದೆ. ಪಾಲಕ,ಬಾಲಕ,ಮಾಲಕ,ಚಾಲಕರ ಪರಿವರ್ತನೆಯೇ ದೇಶದ ಪರಿವರ್ತನೆಗೆ ನಾಂದಿಯಾಗುತ್ತದೆ. ಈ ಮೂಲಕವಾದರೂ ಸರಕಾರಿ ಶಾಲೆಗಳು ಉಳಿದು ಬೆಳೆಯಲಿ.

# ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪೋಷಕರ ಹಾಗೂ ಶಿಕ್ಷಕರ ಪಾತ್ರ ಬಹಳ ಪ್ರಮುಖ ಸ್ಥಾನ ಹೊಂದಿದೆ: ಡಾಕ್ಟರ್ ಈರಣ್ಣ ಕೋಸಗಿ




**ನೈಜ್ಯ ದೆಸೆ ನ್ಯೂಸ್**

**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಿಜನಗೇರಾ ಈ ಶಾಲೆಯಲ್ಲಿ ಹಮ್ಮಿಕೊಂಡಿರುವ ಪೋಷಕ ಶಿಕ್ಷಕರ ಮಹಾ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಡಾಕ್ಟರ್ ವೀರಣ್ಣ ಕೋಸಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ರಾಯಚೂರು ಇವರು ಮಾತನಾಡುತ್ತಾ.**

ರಾಷ್ಟ್ರ ನಿರ್ಮಾಣ ಮತ್ತು ಚೈತನ್ಯಶೀಲ ಸಮಾಜ ನಿರ್ಮಾಣದ ಸಹಕಾರಕ್ಕಾಗಿ ಅರ್ಹ ವಯೋಮಾನದ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಿ ನಿರಂತರವಾಗಿ ಹಾಜರಾಗಿ ಗುಣಮಟ್ಟದ ಶಿಕ್ಷಣ ಪಡೆಯುವುದು ಅಗತ್ಯವಾಗಿರುತ್ತದೆ ಎಲ್ಲಾ ಶೈಕ್ಷಣಿಕ ಉಪಕ್ರಮಗಳು ಅನುಷ್ಠಾನಗೊಳ್ಳಬೇಕಾದರೆ ಪಾಲಕರ ಹಾಗೂ ಶಿಕ್ಷಕರ ಸಮನ್ವಯ ಬಹಳ ಮುಖ್ಯವಾಗಿರುತ್ತದೆ, ಆದ್ದರಿಂದ ಸರ್ಕಾರ ಮತ್ತು ಶಿಕ್ಷಣ ಇಲಾಖೆ ಪೋಷಕ-ಶಿಕ್ಷಕ ಮಹಾಸಭೆಯನ್ನು ಆಯೋಜಿಸಿದೆ. ಈ ಕಾರ್ಯಕ್ರಮದ ಪ್ರಮುಖ ಉದ್ದೇಶ ಸರ್ಕಾರದ ನೀಡಲಾಗುತ್ತಿರುವ ಪ್ರೋತ್ಸಾಹದಾಯಕ ಯೋಜನೆಗಳ ಬಗ್ಗೆ ಪೋಷಕರು ತಿಳಿದುಕೊಳ್ಳಬೇಕು.

ಮಧ್ಯಾಹ್ನದ ಬಿಸಿ ಊಟ, ಉಚಿತ ಪಠ್ಯಪುಸ್ತಕ ಹಾಗೂ ಸಮವಸ್ತ್ರ ವಿತರಣೆ, ಮೊಟ್ಟೆ ಮತ್ತು ಬಾಳೆಹಣ್ಣು ಮಕ್ಕಳಿಗೆ ವಿತರಣೆಯಾಗುತ್ತಿದೆ ಎನ್ನುವುದನ್ನು ಗಮನಿಸಬೇಕು .ಮಕ್ಕಳ ಹಕ್ಕುಗಳು ಆರ್‌ಟಿಐ ಕಾಯ್ದೆ, ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ, ಮಕ್ಕಳ ರಕ್ಷಣೆ ನೀತಿ ಮತ್ತು ಪೋಕ್ಸೋ ಕಾಯ್ದೆ ಬಗ್ಗೆ ಪ್ರತಿಯೊಬ್ಬರು ತಿಳಿದುಕೊಳ್ಳಬೇಕು .ಶಾಲೆಯಿಂದ ಗೈರಜರಾಗುವ ಹಾಗೂ ಬಾಲಕಾರ್ಮಿಕ ಬಾಲ್ಯ ವಿವಾಹಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪೋಷಕರ ಜವಾಬ್ದಾರಿ ಪ್ರಮುಖವಾಗಿರುತ್ತದೆ ಎಂದ ಹೇಳಿದರು.

ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣಕ್ಕೆ ಪೂರಕವಾಗಿ ಸರ್ಕಾರದಿಂದ ಅನುಷ್ಠಾನಗೊಳ್ಳುತ್ತಿರುವ ಉಪಕ್ರಮಗಳು ಪೋಷಕರು ಶಿಕ್ಷಕರು ಹಾಗೂ ಸ್ಥಳೀಯ ಜನಪ್ರತಿನಿಧಿಗಳ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾದ ವಾತಾವರಣ ನಿರ್ಮಿಸುವುದು ಪೋಷಕ ಶಿಕ್ಷಕ ಮಹಾಸಭೆಯ ಉದ್ದೇಶವಾಗಿದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ನೂರಕ್ಕಿಂತ ಹೆಚ್ಚು ಪೋಷಕರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಎಸ್ ಡಿ ಎಂ ಸಿ ಅಧ್ಯಕ್ಷ ರಹಿಂ , ಗ್ರಾಮ ಪಂಚಾಯತಿ ಉಪಾಧ್ಯಕ್ಷರಾದ ಸುಂದರ್ ರಾಜ್ ಶಾಲೆಯ ಮುಖ್ಯ ಗುರುಗಳಾದ ರಮೇಶ್ ರಾಥೋಡ್ ಶಿಕ್ಷಕ ಸಿಬ್ಬಂದಿ ಭಾಗವಹಿಸಿದ್ದರು. ಶಿಕ್ಷಣ ಸಂಯೋಜಕ ರಾಮಕೃಷ್ಣ ಕಟ್ಟಾವಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

# ಕಳಚುತ್ತಿದೆ ಕಳಚೂರಿಯರಕೊಂಡಿ

**ಇತಿಹಾಸವೆಂದೊಡನೆ ನಮ್ಮ ಅಕ್ಷಿಪಟಲದ ಮೇಲೆ ಸ್ಮೃತಿಪಟಲದ ಹಿಂದೆ ರಾಜ ಮಹಾರಾಜರ ಶೌರ್ಯ,ಸಾಹಸ,ಸಿಂಹದಂತೆ ಘರ್ಜಿಸುತ್ತಿದ್ದರೂ ಕಲಾಪ್ರೌಡಿಮೆಗೆ ಕರಗುವ ಮೃದುವಾದ ಮನಸ್ಸು ,ಪ್ರೀತಿಗಾಗಿ ಬೆಲೆಕಟ್ಟಲಾಗದ ಭವ್ಯ ಮಹಲುಗಳ ಅರ್ಪಣೆ,ಕಲೆಗಾಗಿ ಕಲೆಯನ್ನು ಬೆಳೆಸಿದ ಅವರ ಹೃದಯಶ್ರೀಮಂತಿಕೆ ಗೋಚರವಾಗುತ್ತದೆ ಅಲ್ಲವೇ ಹೌದು ಇದು ಅಕ್ಷರಶಃ ಸತ್ಯ.ಅವರು ಅಂದು ರಕ್ತ,ಬೆವರು,ಹಣದ ಹೊಳೆಯನ್ನೇ ಹರಿಸಿ ನಿರ್ಮಿಸಿದ ನೂರಾರು ಸ್ಮಾರಕಗಳನ್ನು ಇಂದು ನಮ್ಮಿಂದ ರಕ್ಷಿಸಿಕೊಳ್ಳಲಾಗುತ್ತಿಲ್ಲವಲ್ಲ ಎಂಬುದೊಂದೇ ನನ್ನ ಅಳಲು.**

ಈ ವಿದ್ಯಮಾನಗಳನ್ನೆಲ್ಲ ಗಮನಿಸಿದರೆ ಪುರಾತತ್ವ ಇಲಾಖೆ ಜೀವಂತವಾಗಿದೆಯೋ ಅಥವಾ ಜೀವಂತ ಶವದಂತೆ ಬಿಕ್ಕುತ್ತಿದೆಯೋ ತಿಳಿಯದಾಗಿದೆ. ಏಕೆಂದರೆ ಅವಸಾನದ ಅಂಚಿನಲ್ಲಿರುವ ಹಲವಾರು ಸ್ಮಾರಕಗಳು ಭುವಿಯ ಬಸಿರೊಳಗೆ ಆಶ್ರಯ ಪಡೆಯುತ್ತಿರುವುದನ್ನು ಕಂಡರೆ ಇಂತಹ ಅನುಮಾನ ಸಹಜವಾಗಿಯೇ ಬರುತ್ತದೆ. ಇಂತಹ ಅಳಿವಿನ ಅಂಚಿನಲ್ಲಿರುವ ಸ್ಮಾರಕಗಳ ಪಟ್ಟಿಗೆ ಪುರಾತನ ಕಾಲದಲ್ಲಿ ಎಡೆದೊರೆ 2000 ನಾಡಿನ ಮೊರಟ 300 ವಿಭಾಗದ(ಈಗಿನ ಸಿರಿವಾರ ತಾಲೂಕಿನ ಮಲ್ಲಟ ಗ್ರಾಮ ) ಬಳಗಾನೂರು ಗ್ರಾಮದ ಬ್ರಾಹ್ಮಣರಿಗೆ ದತ್ತಿ ನೀಡಲಾದ ಸರ್ವನಮಸ್ಯದ ಅಗ್ರಹಾರ ವಾಗಿದ್ದ ಪಿರಿಯ ಬಳೆಗಾರನೂರೆಂದೇ ಪ್ರಚಲಿತದಲ್ಲಿತ್ತು.

ಈ ಊರು ನಂತರದ ದಿನಗಳಲ್ಲಿ ರಾಯಚೂರು ದೋಆಬ್ ಪ್ರದೇಶಕ್ಕೆ ಸೇರಿತು.ಬಳಗಾನೂರು ಗ್ರಾಮವನ್ನು ಕಲ್ಯಾಣ ಚಾಲುಕ್ಯರು,ಕಲಚೂರಿಯರು,ಸೇವುಣರು,ವಿಜಯನಗರದ ಅರಸರು,ಬಹುಮನಿ ಸುಲ್ತಾನರ ರಾಜರುಗಳ ಆಡಳಿತಕ್ಕೊಳಪಟ್ಟಿದ್ದ 22 ಅಗ್ರಹಾರಗಳಲ್ಲಿ ಒಂದಾಗಿತ್ತು. ಬಳಗಾನೂರು ಕಳಚೂರಿಯರ ಮನೆತನದ ರಾಯಮುರಾರಿ ಸೋವಿದೇವನ ಆಳ್ವಿಕೆಯಲ್ಲಿ ಒಳಪಟ್ಟ ಈ ಬಳಗಾನೂರು ಅಂದು ಸಕಲ ಸಿರಿ ಸಂಪತ್ತಿನಿಂದ ರಾರಾಜಿಸುತ್ತಿದ್ದು ತನ್ನದೇಯಾದಂತಹ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ಇಲ್ಲಿನ ಒಂದೊಂದು ಶಿಲೆಯೂ ಒಂದೊಂದು ರೋಮಾಂಚನಕಾರಿ ಕಥೆಯನ್ನು ಹೇಳುತ್ತದೆ. ಅಂದಿನ ರಾಜರಕಾಲದಲ್ಲಿ ನಿರ್ಮಾಣಗೊಂಡ ಮಂದಿರಗಳು ಶಿಲಾಶಾಸನಗಳು ಇಲ್ಲಿವೆ.

ಇಲ್ಲಿನ ಶಿಲಾಶಾಸನಗಳನ್ನು ಇತಿಹಾಸಕಾರ ಸಂಶೋಧಕ ಡಾ,ಚನ್ನಬಸಪ್ಪ ಮಲ್ಕಂದಿನ್ನಿಯವರು ಪತ್ತೆ ಹಚ್ಚಿ ಓದಿ ಅದರಬಗ್ಗೆ 2006 ರಲ್ಲಿ ಬೆಂಗಳೂರು ವಿಶ್ವ ವಿದ್ಯಾಲಯಕ್ಕೆ ಬರೆದ ತಮ್ಮ ಪಿ,ಹೆಚ್,ಡಿ, ಮಹಾಪ್ರಬಂಧ ವಾದ "ರಾಯಚೂರು ಜಿಲ್ಲೆಯ ಶಾಸನಗಳ ಸಮಗ್ರ ಅಧ್ಯಯನ" ದಲ್ಲಿ ಹಾಗೂ ನಂತರ ಬರೆದ ರಾಯಚೂರು ಸಂಪದ 1 ಎಂಬ ಕೃತಿಯಲ್ಲಿ ಬಳಗಾನೂರಿನ ಶಾಸನಗಳ ಬಗ್ಗೆ ಉಲ್ಲೇಖಿಸಿದ್ದಾರೆ. ಕ್ರಿ,ಶ, 1175 ರಲ್ಲಿ ಕಳಚೂರಿ ಅರಸ ರಾಯಮುರಾರಿ ಸೋವಿ ದೇವನ ಆಳ್ವಿಕೆಯಲ್ಲಿ, ವಡ್ಡವ್ಯವಹಾರಿಯಾಗಿದ್ದ ಸಬ್ಬದೇವಶೆಟ್ಟಿ ಎಂಬ ವರ್ತಕ ಈ ಲಕ್ಷ್ಮಿನಾರಾಯಣ ದೇವಸ್ಥಾನವನ್ನು ಕಟ್ಟಿಸುತ್ತಾನೆ. ಇದು ವೇಸರ ಶೈಲಿಯಲ್ಲಿರುವ ಏಕಕೂಟ ವೈಷ್ಣವ ದೇವಸ್ಥಾನವಾಗಿದೆ.ಒಂದು ಗರ್ಭಗುಡಿ, ಒಂದು ಅಂತರಾಳ ಮತ್ತು ನವರಂಗದಲ್ಲಿ ಕಣಶಿಲೆಯಲ್ಲಿ ಕೆತ್ತಲ್ಪಟ್ಟ ನಾಲ್ಕು ಸ್ತಂಭಗಳಿವೆ. ಅದರಲ್ಲಿ ಪೀಠ,ಚೌಕ,ಕಂಠಭಾಗದಲ್ಲಿ ವೃತ್ತಾಕಾರ ಅದರ ಮೇಲೆ ಸಾದಾ ಬೋದಿಗಳಿವೆ.ಗರ್ಭಗುಡಿಯಲ್ಲಿ ನಾರಾಯಣನು ತನ್ನ ಎಡತೊಡೆಯ ಮೇಲೆ ಲಕ್ಷ್ಮಿಯನ್ನು ಕೂಡಿಸಿಕೊಂಡಿರುವ ಕಪ್ಪುಶಿಲೆಯ ಲಕ್ಷ್ಮಿ ನಾರಾಯಣ ದೇವರ ವಿಗ್ರಹವಿದೆ.

ಈ ಶಿಲಾದೇಗುಲದ ಕಣಶಿಲೆಯಮೇಲೆ ಶಿಲ್ಪಿಗಳ ಕುಸುರಿಕೆತ್ತನೆಯ ಕಲಾನೈಪುಣ್ಯತೆಯಲ್ಲಿ ಕಲ್ಲರಳಿ ಹೂವಾಗಿ ನಿಂತಂತೆ ಕಾಣುತ್ತಿದೆ.ಇದು ಭಾರತದಲ್ಲಿಯೇ ಎರಡನೆಯದೆನ್ನಬಹುದಾದ ಅಪರೂಪದ ದಕ್ಷಿಣಾಭಿ ಲಕ್ಷ್ಮಿನಾರಾಯಣ ದೇವಸ್ಥಾನವೆಂದು ಹೇಳಲಾಗುತ್ತಿದೆ. ಇದರಲ್ಲಿ ಕನ್ನಡ ಭಾಷೆ ಕನ್ನಡ ಲಿಪಿಯಲ್ಲಿ ಬರೆಯಲ್ಪಟ್ಟಿರುವ ಎರಡು ಕಪ್ಪುಶಿಲೆಯ ಶಾಸನಗಳನ್ನು ಗೋಡೆಗಳಲ್ಲಿ ಜೋಡಿಸಲಾಗಿದೆ.ಅವು ಅಂದಿನ ವೈಭವ,ದೇವಸ್ಥಾನದ ನಿರ್ಮಾಣದ ಹಿನ್ನೆಲೆಯನ್ನು ಸಾರುತ್ತವೆ. ಚಾತ್ರ ಪೆದ್ದಣ್ಣನ ಮೊಮ್ಮೊಕ್ಕಳಾದ ಶ್ರೀಧರ ಶೆಟ್ಟಿ,ಗರ್ಭದಾಸ ಶೆಟ್ಟಿ,ಮತ್ತು ವೈಜನಾಥ ಶೆಟ್ಟಿ ಸೇರಿ ಸಬ್ಬದೇವಶೆಟ್ಟಿ ಎಂಬುವವರ ಮಗ ರವಿದೇವಶೆಟ್ಟಿಯವರಿಂದ ಜಮೀನನ್ನು ಖರೀದಿಸಿ ಈ ದೇವಸ್ಥಾನಕ್ಕೆ ದಾನವಾಗಿ ನೀಡಿದ್ದಾರೆಂಬ ಉಲ್ಲೇಖ ಈ ಶಾಸನಗಳಲ್ಲಿದೆ.

ಈ ಹಿಂದೆ ಲಕ್ಷ್ಮಿ ನಾರಾಯಣ ದೇವಸ್ಥಾನವು ಭೂ ಗರ್ಭದಲ್ಲಿ ಹೂತು ಹೋಗಿತ್ತು.ನಂತರ ಕಾಲಕ್ರಮೇಣ, ಮಳೆ,ಗಾಳಿ,ಜನರ ಓಡಾಟ ಅಧಿಕವಾದಂತೆಲ್ಲ ಈ ದೇವಸ್ಥಾನದ ಅಸ್ತಿತ್ವ ಗೋಚರವಾಯಿತಂತೆ. ಅಂದಿನಿಂದ ಪೂಜೆ ಪುನಸ್ಕಾರಗಳು ಆರಂಭವಾದವೆಂದು ಸ್ಥಳೀಯರು ಹೇಳುತ್ತಾರೆ. ಈ ದೇವಾಲಯದಿಂದ ಕೂಗಳತೆಯ ದೂರದಲ್ಲಿ ಅಮೃತಲಿಂಗ ನಖರೇಶ್ವರ,ಅಗಸ್ತೇಶ್ವರ,ಮನೋಹರ ಚನ್ನಕೇಶವ ದೇವರುಗಳ ಬಗ್ಗೆ ಇಲ್ಲಿನ ಕ್ರಿ,ಶ,1175 ರ ಶಾಸನದಲ್ಲಿದೆ.ಇದು ತ್ರಿಕೂಟಾಚಲ ದೇವಸ್ಥಾನವಾಗಿದ್ದು ಗರ್ಭಗೃಹ,ಅಂತರಾಳ ಭಾಗಗಳಿದ್ದು ನವರಂಗ ಭಾಗ ನಶಿಸಿಹೋಗಿದೆ.




ಇಲ್ಲಿ ಪ್ರತಿ ವರ್ಷದ ಶಿವರಾತ್ರಿಯಂದು ಅನ್ನದಾನ,ಚಿನ್ನದಾನ,ಗೋದಾನ,ಭೂದಾನ,ನಡೆಯುತಿದ್ದವು.ಎಂಬ ಮಾಹಿತಿ ಶಾಸನಗಳ ಮೂಲಕ ತಿಳಿದು ಬರುತ್ತದೆ.ಅದರಜೊತೆಗೆ ಆ ದೇವಸ್ಥಾನದ ಸುತ್ತಮುತ್ತಲಿನ ಹಿರಿಯರಲ್ಲಿ ಈ ದೇವಸ್ಥಾನದಬಗ್ಗೆ ವಿಚಾರಿಸಿದಾಗ,ಈ ಲಕ್ಷ್ಮಿ ನಾರಾಯಣ ದೇವಸ್ಥಾನ ಭೂಗರ್ಭದಲ್ಲಿ ಹೂತುಹೋಗಿತ್ತು,ನಂತರ ಕಾಲಕ್ರಮೇಣ ಮಳೆ,ಗಾಳಿಗಳಿಗೆ ಜನರ ವಾಸ ಅಧಿಕವಾದಂತೆಲ್ಲ ಈ ದೇವಸ್ಥಾನದ ಅಸ್ಥಿತ್ವ ಗೋಚರವಾಯಿತಂತೆ.ಅಂದಿನಿಂದ ಪೂಜೆ ಪುನಸ್ಕಾರಗಳು ಆರಂಭವಾದವೆಂದು ಹೇಳುತ್ತಾರೆ.

**ತೋಟದ ಯಲ್ಲಮ್ಮ ದೇವಸ್ಥಾನ;-** ರಾಯಚೂರು ಜಿಲ್ಲೆಯಲ್ಲಿಯೇ ಶಿಲಾಶಾಸನ ಉಳ್ಳ ಏಕೈಕ ತೋಟದ ಯಲ್ಲಮ್ಮ ದೇವಸ್ಥಾನ ಊರ ಹೊರವಲಯದಲ್ಲಿದ್ದು ಇದರ ಮುಂಭಾಗದಲ್ಲಿರುವ ಶಾಸನಗಳು ಹೇಳುವಂತೆ ರಾಯಚೂರು ಜಿಲ್ಲೆಯ ಅನೇಕ ಶಕ್ತಿ ದೇವಾಲಯಗಳಿಗೆ ಶಾಸನಗಳಿರುವುದಿಲ್ಲ,ಆದರೆ ಈ ದೇವಸ್ಥಾನದ ಶಿಲಾಶಾಸನದಲ್ಲಿ ಶಾಸನೋಕ್ತ ಯಲ್ಲಮ್ಮ ದೇವಿ ಎಂಬ ಉಲ್ಲೇಖವಿದೆ.ಇದರಿಂದ ಇದು ಅಂದಿನ ಕಾಲದ ಪ್ರಮುಖ ದೇವಾಲಯವೆಂದು ತಿಳಿದುಬರುತ್ತದೆ. ಇದರ ಗರ್ಭಗೃಹದಲ್ಲಿ ಯಲ್ಲಮ್ಮ ದೇವಿಯ ಮೂರ್ತಿಯಿದೆ. ಮೂಲಮೂರ್ತಿ ತೃಟಿತಗೊಂಡ ಕಾರಣ ಇತ್ತೀಚಿಗೆ ಹೊಸ ವಿಗ್ರಹವನ್ನು ಮಾಡಿಸಿಡಲಾಗಿದೆ. ಇದರ ಮುಂಭಾಗದಲ್ಲಿ 4 ಸ್ಥಂಭಗಳ 11-12 ನೇ ಶತಮಾನಕ್ಕೆ ಸೇರಿದ ನವರಂಗವಿದೆ.

**ಆದಯ್ಯ ಅಮರಯ್ಯ ದೇವಸ್ಥಾನ:-** ಈ ದೇವಾಲಯವು ಊರ ಹೃದಯಭಾಗದಲ್ಲಿದೆ. ಇದರ ಶೈಲಿಯ ಆಧಾರದಿಂದ ಇದು ಕ್ರಿ,ಶ,11_12 ನೇ ಶತಮಾನಕ್ಕೆ ಸೇರಿದ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳಾಗಿವೆ.ಈ ಎರಡು ದೇವಾಲಯಗಳಲ್ಲಿ ಗರ್ಭಗೃಹ,ಅಂತರಾಳ ಭಾಗಗಳು ಕಂಡುಬರುತ್ತಿದ್ದು, ನವರಂಗದ ಭಾಗಗಳು ಸಂಪೂರ್ಣ ನಶಿಸಿ ಹೋಗಿವೆ. ಈ ದೇವಾಲಯಗಳ ಅಂತರಾಳ ಭಾಗಗಳಲ್ಲಿ ಶಾಸನಗಳಿದ್ದು ಇವುಗಳು ಆದಯ್ಯ ಅಮರಯ್ಯ ದೇವಾಲಯಗಳು ಎಂದು ತಿಳಿಸುತ್ತವೆ. ನಾಗಭೂಷಣ ದೇವಾಲಯ:- ಈ ದೇವಾಲಯವು ಉತ್ತರಾಭಿಮುಖವಾಗಿದ್ದು ಕ್ರಿ,ಶ, 12_13 ನೇ ಶತಮಾನಕ್ಕೆ ಸೇರುತ್ತದೆ. ಇದರ ಗರ್ಭಗೃಹದಲ್ಲಿ ಪಾಣಿವಾಟ ಈಶ್ವರಲಿಂಗವಿದ್ದು ಅಂತರಾಳಭಾಗದಲ್ಲಿ ಲಿಂಗಕ್ಕೆ ಎದುರಾಗಿ ಆಮೆಯ ವಿಗ್ರಹವನ್ನು ಕೂಡಿಸಲಾಗಿದೆ. ನವರಂಗಭಾಗದಲ್ಲಿ ನಾಲ್ಕು ಕಂಬಗಳಿದ್ದು ಇವುಗಳೊಂದಿಗೆ ಇನ್ನೂ ಹಲವು ಸ್ತಂಭಗಳು ಕಾಣಬರುತ್ತವೆ.

ಈ ದೇವಸ್ಥಾನ ಸಂತೆಬಜಾರದ ಹತ್ತಿರವಿರುವುದರಿಂದ ದಾರಿಹೋಕರು, ನಿರ್ಗತಿಕರು ಬಂದು ವಿಶ್ರಾಂತಿಪಡೆಯುತ್ತಾರೆ. ಮಾರುತಿದೇವಸ್ಥಾನ. ಈ ದೇವಾಲಯವು ದಕ್ಷಿಣಾಭಿಮುಖವಾಗಿದ್ದು ಗರ್ಭಗೃಹದಲ್ಲಿ ವೀರಾಂಜನೇಯ ವಿಗ್ರಹವಿದೆ.ವಿಶೇಷವೆಂಬಂತೆ ಮಾರುತಿದೇವರ ಕೈಯಲ್ಲಿ ತ್ರಿಶೂಲವಿರುವುದನ್ನು ಕಾಣಬಹುದು ಇದರ ಮುಂಭಾಗದ ಮಂಟಪದಲ್ಲಿ ಸುಂದರವಾದ ಕೆತ್ತನೆಯುಳ್ಳ ಎಂಟು ಸ್ತಂಭಗಳು ಕಂಡುಬರುತ್ತವೆ. ಆದಯ್ಯ ಅಮರಯ್ಯ ದೇವಾಲಯದ ಪಶ್ಚಿಮದಲ್ಲಿರುವ ವೀರಭದ್ರೇಶ್ವರ ದೇವಾಲಯ ಉತ್ತರಾಭಿಮುಖವಾಗಿದೆ. ಇದರ ಗರ್ಭಗೃಹದಲ್ಲಿ ನಿಂತ ಭಂಗಿಯ ಕಪ್ಪು ಶಿಲೆಯ ವೀರಭದ್ರೇಶ್ವರ ವಿಗ್ರಹವಿದೆ. ಇದರ ಮುಂಬದಿಯಲ್ಲಿನ ಮಂಟಪದಲ್ಲಿ ನಂದಿವಿಗ್ರಹವಿದೆ. ಇದರ ಮುಂಬದಿಯ ಆವರಣ,ಆದಯ್ಯ ಅಮರಯ್ಯ ಆವರಣ,ಮಾರುತಿ ಮಂದಿರದ ಆವರಣಗಳಲ್ಲಿ ವೀರಗಲ್ಲುಗಳು ಕಾಣಬರುತ್ತವೆ.

ಈ ಮೇಲಿನವುಗಳಷ್ಟೇ ಅಲ್ಲದೆ ನಗರೇಶ್ವರ ದೇವಾಲಯದ ಹತ್ತಿರದಲ್ಲಿ ಕ್ರಿ,ಶ 11_12 ನೇ ಶತಮಾನದ ಎರಡು ತೃಟಿತ ಜೈನ ತೀರ್ಥಂಕರರ ವಿಗ್ರಹಗಳು ಇವೆ. ಅಂಬ್ಲಿ ಮರಿಯಪ್ಪನವರ ಮನೆಯ ಪಕ್ಕದಲ್ಲಿ ತೃಟಿತ ಶಾಸನೋಕ್ತ ಮನೋಹರ ಚನ್ನಕೇಶವ ವಿಗ್ರಹ ಅನಾಥವಾಗಿ ಬಿದ್ದಿದೆ.ಇದರಿಂದ ಅನತಿ ದೂರದ ಶಂಕರಬಂಡಿ ದಿಬ್ಬವೆಂದೇ ಪ್ರಚಲಿತದಲ್ಲಿರುವ ನವ ಶಿಲಾಯುಗಕಾಲದ ಮಾನವರು ವಾಸಮಾಡಿದ ಬೂದಿದಿಬ್ಬವಿದೆ. ಆದಯ್ಯ ಅಮರಯ್ಯ, ನಾಗಭೂಷಣ,ದೇವಸ್ಥಾನದ ಕಲ್ಲುಗಳು ಬಳಗಾನೂರಿನ ಐತಿಹಾಸಿಕ ಕಥೆಗಳನ್ನು ಹೇಳುತ್ತಾ ಬಳಗಾನೂರಿನ ಹಿರಿಮೆಗೆ ಮುಕುಟಪ್ರಾಯವಾಗಿ ನಿಂತಿವೆ.

ಇದಷ್ಟೇ ಅಲ್ಲ ನಂತರದ ದಿನಗಳಲ್ಲೂ ಶಾಪಾನುಗ್ರಹ ಸಮರ್ಥರಾಗಿದ್ದ ಮರಿತಾತನವರು,ಈಗಿನ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ವೀರತಪಸ್ವಿಗಳಾಗಿರುವ ವೀರಭದ್ರ ಶಿವಾಚಾರ್ಯರು,ಎಪ್ಪತ್ತರ ದಶಕದಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಎರಡುಬಾರಿ ಸಂಸದರಾಗಿ ಆಯ್ಕೆಯಾಗಿದ್ದ ಶಂಕರದೇವರ ಮಠದ ಶ್ರೀ ಸಿದ್ದರಾಮೇಶ್ವರ ಮಹಾಸ್ವಾಮಿಗಳು,ಮುಂಬೈ ಮಾರುಕಟ್ಟೆಯಲ್ಲಿ ಬಳಗಾನೂರು ಸೀರೆಯಂತಲೇ ಮಾರಾಟವಾಗುತ್ತಿದ್ದ ಸೀರೆಯ ನೇಯ್ಗೆಯ ಕೌಶಲ್ಯ ಮೈಗೂಡಿಸಿ ಕೊಂಡಿದ್ದ ಕಂಟ್ಲೇರ ಕುಟುಂಬ, ನಾಟಕ,ಕಲೆ,ಬಯಲಾಟ, ಸಾಹಿತ್ಯ,ಶಿಕ್ಷಣ ಕ್ಷೇತ್ರದಲ್ಲಿ ತನ್ನದೇಯಾದ ಮಹತ್ವವನ್ನು ಇಂದಿಗೂ ಉಳಿಸಿಕೊಂಡು ಬಂದಿರುವ ಬಳಗಾನೂರು ಬತ್ತದ ನಾಡಿನ ಐಸಿರಿಯನ್ನು ಜಗದಗಲ ಪಸರಿಸುತ್ತಿದೆ.

ಆದರೆ ಕಲಾಶ್ರೀಮಂತಿಕೆಯನ್ನು ಹೊಂದಿರುವ ಐತಿಹಾಸಿಕ ಕುರುಹುಗಳಾಗಿರುವ ಮಂದಿರಗಳು ಜನರ ತಾತ್ಸಾರದಿಂದ ದನದಕೊಟ್ಟಿಗೆಗಳಾಗಿ,ತಿಪ್ಪೆಗುಂಡಿಗಳಾಗಿ ಎಣ್ಣೆ,ಸುಣ್ಣ,ಬಣ್ಣಗಳಿಂದ ವಿರೂಪಗೊಂಡು ತಿಪ್ಪೆಯಲ್ಲಿಟ್ಟ ವಜ್ರದಂತಾಗಿದೆ. ರಾತ್ರಿಯೇ ಅರಳಿ ಬಾಡಿಹೋಗುವ ಬ್ರಹ್ಮಕಮಲದಂತೆ ಬಳಗಾನೂರು ಬೆಳಕಿಗೆ ಬರುವಮುನ್ನ ನೆಪತ್ಯಕ್ಕೆ ಸರಿಯುತ್ತಿರುವುದು ವಿಪರ್ಯಾಸಕರ ಸಂಗತಿಯಾಗಿದೆ. ಆದರೂ ಚಳಿ,ಗಾಳಿ,ಮಳೆಗಳಿಗೆ ಮೈಯೊಡ್ಡಿ ನಿಂತಿರುವ ಈ ದೇವಾಲಯಗಳು ನಾವೆಷ್ಟು ಗಟ್ಟಿಗರು?ನಮ್ಮ ಕರ್ತೃಗಳು ಎಷ್ಟು ಕುಶಾಗ್ರಮತಿಗಳು,ಎಂಬುದನ್ನು ಸಾರುತ್ತಾ,ಆಸಕ್ತರ ಕಣ್ಮನಗಳಿಗೆ ತಂಪೆರೆಯುತ್ತಾ,ಜ್ಞಾನಧಾರೆಯನ್ನು ಸುರಿಸುತ್ತಾ,ಇನ್ನುಂದಾದರೂ ನಮ್ಮ ಜೀರ್ಣೋದ್ಧಾರವಾದೀತೆ? ಎಂದು ಕಾದುಕುಳಿತಿವೆ. ಇನ್ನೂ ಈ ಭಾಗದ ಜನ,ಜನಪ್ರತಿನಿಧಿಗಳು,ಪುರಾತತ್ವ ಇಲಾಖೆ ಸುಮ್ಮನೆ ಕುಳಿತರೆ, ಆ ಕಥೆ ಹೇಳುವ ಕಲ್ಲುಗಳಿಗಿಂತ ಕಡೆಯಾಗಬೇಕಾಗುತ್ತದೆ.

ಅಂದು ಕೀರ್ತಿಯ ಉತ್ತುಂಗದಲ್ಲಿದ್ದ ಬಳಗಾನೂರು ಇಂದು ಹಾಳೂರಿನಂತೆ ಬಿಕೋ ಎನ್ನುತ್ತಿದೆ. ಇಲ್ಲಿನ ಕೆಲ ಇತಿಹಾಸಪ್ರೇಮಿಗಳ ಕಾಳಜಿಯಿಂದ ಅಲ್ಪಸ್ವಲ್ಪ ಜೀರ್ಣೋದ್ಧಾರವಾಗಿದೆ ಆದರೆ ಅದು ದೇವಸ್ಥಾನದ ಮೂಲ ರೂಪಕ್ಕೆ ದಕ್ಕೆ ತರುತ್ತಿದೆ. ಹೀಗಾಗಿ ಪುರಾತತ್ವ ಇಲಾಖೆ ಮುಂದಾಗಿ ಸಂರಕ್ಷಿಸಿದರೆ ಮುಂದಿನ ಪೀಳಿಗೆಗೂ ಪೂರ್ವಜರ ಕಲಾಸಿರಿ ಬಿತ್ತರವಾಗುತ್ತದೆ ಇಲ್ಲವಾದರೆ ಹೇಗಿತ್ತು? ಯಾರಿರಬಹುದು? ಎಲ್ಲಿ?ಯಾವಾಗ?ಏಕೆ? ಹೇಗೆ? ಎಂಬ ಪ್ರಶ್ನೆಗಳೇ ಉತ್ತರಗಳಾಗಿಬಿಡುತ್ತವೆ.ಕಾರಣ ಕಳಚೂರಿಯರ ಕೊಂಡಿ ಕಳಚಿ ಕಾಲಗರ್ಭಸೇರುವ ಮುನ್ನರಕ್ಷಿಸಿ ಮುಂದಿನ ಪೀಳಿಗೆಗಳಿಗೆ ಬಳುವಳಿಯಾಗಿ ಬಿಟ್ಟುಹೋಗುವ ಕಾರ್ಯ ಆಗಬೇಕಿದೆ.

ಸುರೇಶ ಬಳಗಾನೂರು
M,A,B,ed.M,phil.